
# ಸಂರಕ್ಷಣೆ

(ಕರ್ನಾಟಕ ಜೀವವೈವಿಧ್ಯ ಕಾರ್ಯತಂತ್ರ ಮತ್ತು ಕ್ರಿಯಾ ಯೋಜನೆ)











2002

ಕರ್ನಾಟಕ ರಾಜ್ಯ ಜೀವವೈವಿಧ್ಯ ಕಾರ್ಯತಂತ್ರ ಮತ್ತು ಕ್ರಿಯಾಯೋಜನೆಯನ್ನು ಸಾರ್ವಜನಿಕರಿಂದ ಬಂದಂತಹ ಅಮೂಲ್ಯವಾದ ಸಲಹೆಗಳಿಂದ ಹಾಗೂ ಪ್ರೊ। ಮಾಧವ್ ಗಾಡಗೀಳ್ ಅವರ ಮುಂದಾಳತ್ವದಲ್ಲಿದ್ದ ಈ ಯೋಜನೆಯಲ್ಲಿ ತೊಡಗಿಸಿಕೊಂಡ ಕ್ರಿಯಾಶೀಲ ವ್ಯಕ್ತಿಗಳ ಗುಂಪಿನ ಕೊಡುಗೆಯಿಂದ ಸಿದ್ಧಪಡಿಸಲಾಗಿದೆ.

ಕರ್ನಾಟಕ ರಾಜ್ಯ ಜೀವವೈವಿಧ್ಯ ಕಾರ್ಯತಂತ್ರ ಮತ್ತು ಕ್ರಿಯಾಯೋಜನೆ ಚಟುವಟಿಕೆಯನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸ್ಟೀಯರಿಂಗ್ ಕಮಿಟಿಯು ಮಾರ್ಗದರ್ಶಿಸಿತು. ಈ ವರದಿಯನ್ನು ಕನ್ನಡ ಭಾಷೆಯಲ್ಲಿ ಪ್ರೊ। ಬಿ.ಎಂ. ಕುಮಾರಸ್ವಾಮಿ ಹಾಗೂ ಶ್ರೀ ಸಿ. ಯತಿರಾಜುರವರು ಸಿದ್ಧಪಡಿಸಿದರು. ಪ್ರೊ। ಬಿ.ಎಂ. ಕುಮಾರಸ್ವಾಮಿಯವರು ಕರ್ನಾಟಕ ರಾಜ್ಯ ಜೀವವೈವಿಧ್ಯ ಕಾರ್ಯತಂತ್ರ ಹಾಗೂ ಕ್ರಿಯಾ ಯೋಜನೆಯ ಸಂಕ್ಷಿಪ್ತ ವರದಿಯನ್ನು ಸಿದ್ಧಪಡಿಸಿರುತ್ತಾರೆ. ಈ ವರದಿಯ ವಿಷಯವನ್ನು ಬಳಸುವವರು ಸೂಕ್ತ ಋಣವನ್ನು ಸೂಚಿಸಬೇಕಾಗಿ ವಿನಂತಿ.

# ಸಂರಕ್ಷಣೆ

(ಕರ್ನಾಟಕ ಜೀವ ವೈವಿಧ್ಯ ಕಾರ್ಯತಂತ್ರ
ಮತ್ತು ಕ್ರಿಯಾ ಯೋಜನೆ)

# ಸಂರಕ್ಷಣೆ

## ಜೀವ ವೈವಿಧ್ಯದ ಸುತ್ತ ಮುತ್ತ

ನಮ್ಮ ಈ ಭೂಮಿ, ಈ ಪುಟ್ಟ ಗ್ರಹ, ಇದರಂಥದ್ದು ನಮ್ಮ ಸೌರವ್ಯೂಹದಲ್ಲೇ ಏಕೆ ಇಡೀ ವಿಶ್ವದಲ್ಲೇ ಇನ್ನೊಂದಿಲ್ಲ. ನಮ್ಮ ಭೂಮಿಯ ಹಿರಿಮೆ ಎಂದರೆ, ಇದು ಮಾತ್ರ ಜೀವಂತ ಗ್ರಹ. ಬೇರೆಲ್ಲವೂ ನಿರ್ಜೀವ ಗ್ರಹಗಳು. ಈ ಭೂಮಿ ಒಂದು ಜೀವದ ಬುಗ್ಗೆ. ಜೀವದ ಕಣಜ. ಕೋಟ್ಯಾಂತರ ಬಗೆಯ ಜೀವಿಗಳು ಈ ಭೂಮಿಯಲ್ಲಿ ನಿರಂತರವಾಗಿ ಹುಟ್ಟಿ ಬೆಳೆಯುವುದಕ್ಕೆ ಕಾರಣವೆಂದರೆ ಈ ಭೂಮಿಯಲ್ಲಿ ಹಾಗೂ ಇಲ್ಲಿ ಮಾತ್ರ ಒಂದು ಜೀವ ಪೋಷಕ ವ್ಯವಸ್ಥೆ ಇದೆ. ಅದನ್ನು ಭೌತಿಕ ಪರಿಸರ ಎನ್ನುತ್ತೇವೆ. ಮಣ್ಣು, ನೀರು, ಗಾಳಿ ಮತ್ತು ಶಾಖ - ಈ ನಾಲ್ಕು, ಜೀವ ಪೋಷಕ ವ್ಯವಸ್ಥೆಯ ಮುಖ್ಯ ಅಂಗಗಳು. ಇವುಗಳ ಆಧಾರದ ಮೇಲೆಯೇ ಕೋಟ್ಯಾಂತರ ಜೀವಿಗಳು ಈ ಭೂಮಿಯಲ್ಲಿ ಹುಟ್ಟಿ ಬೆಳೆಯುತ್ತವೆ.

ಭೂಮಿಯಲ್ಲಿ ಕಂಡುಬರುವ ಜೀವಿಗಳೆಲ್ಲಾ ಒಂದೇ ಬಗೆಯಾಗಿಲ್ಲ. ಜೀವಿಗಳನ್ನು ಮುಖ್ಯವಾಗಿ

1) ಸಸ್ಯಗಳು 2) ಪ್ರಾಣಿಗಳು 3) ಪಕ್ಷಿಗಳು 4) ಕೀಟಗಳು ಎಂದು ವಿಂಗಡಿಸಬಹುದು. ಪ್ರತಿಯೊಂದು ವರ್ಗದಲ್ಲಿಯೂ ಕೋಟ್ಯಾಂತರ ಬಗೆಗಳಿವೆ. ಒಂದಿದ್ದಂತೆ ಮತ್ತೊಂದಿಲ್ಲ. ಜೀವಿಗಳಲ್ಲಿ ಕಂಡುಬರುವ ಈ ವೈವಿಧ್ಯವನ್ನು 'ಜೀವವೈವಿಧ್ಯ' ಎನ್ನುತ್ತಾರೆ.

ಪ್ರಪಂಚದಲ್ಲಿ ಎಷ್ಟು ಪ್ರಭೇದದ ಜೀವಿಗಳಿವೆ? ಇದು ಯಾರಿಗೂ ಸರಿಯಾಗಿ ಗೊತ್ತಿಲ್ಲ. ಒಬ್ಬೊಬ್ಬ ವಿಜ್ಞಾನಿಗಳು ಒಂದೊಂದು ಅಂದಾಜು ಮಾಡುತ್ತಾರೆ. ಕೆಲವರು 1 ಕೋಟಿ ಎಂದರೆ ಮತ್ತೆ ಕೆಲವರು 14 ಕೋಟಿ ಪ್ರಬೇಧಗಳು ಇರಬಹುದು ಎನ್ನುತ್ತಾರೆ. ಯಾವುದೂ ನಿಖರವಲ್ಲ. ಆದರೆ ಒಂದು ಅಂಶ ಮಾತ್ರ ಚೆನ್ನಾಗಿ ಗೊತ್ತು. ಅದೆಂದರೆ 'ನಮಗೆ ಗೊತ್ತಿರುವುದು ಬಹಳ ಕಡಿಮೆ', 'ಗೊತ್ತಿಲ್ಲದ್ದೇ ಅಪಾರ' ಎಂಬುದು.

ಜೀವ ವೈವಿಧ್ಯವನ್ನು ವಿಜ್ಞಾನಿಗಳು 3 ಹಂತಗಳಲ್ಲಿ ಅಧ್ಯಯನ ಮಾಡುತ್ತಾರೆ. ಅವು

1) ವಂಶವಾಹಿ ವೈವಿಧ್ಯ

2) ಪ್ರಬೇಧ ವೈವಿಧ್ಯ ಮತ್ತು

3) ಆವಾಸ ವೈವಿಧ್ಯ

ಜೀವ ವೈವಿಧ್ಯವನ್ನು ಇನ್ನೂ ಒಂದು ದೃಷ್ಟಿಯಿಂದ ವಿಭಾಗ ಮಾಡುತ್ತಾರೆ.

1) ಕಾಡು ಜಾತಿ - ಜೀವ ವೈವಿಧ್ಯ (ವೈಲ್ಡ್ ಬಯೋಡೈವರ್ಸಿಟಿ)

2) ನಾಡು ಜಾತಿ - ಜೀವ ವೈವಿಧ್ಯ (ಡೊಮೆಸ್ಟಿಕೇಟೆಡ್ ಬಯೋ ಡೈವರ್ಸಿಟಿ)

ಅರಣ್ಯಗಳಲ್ಲಿ ನೈಸರ್ಗಿಕವಾಗಿ ಬೆಳೆಯುವ ಸಸ್ಯಗಳು, ಪ್ರಾಣಿ, ಪಕ್ಷಿ ಮತ್ತು ಕೀಟಗಳಲ್ಲಿ ಕಂಡುಬರುವ ವೈವಿಧ್ಯವನ್ನು ಕಾಡು ಜಾತಿ, ಜೀವ ವೈವಿಧ್ಯ ಎನ್ನುತ್ತೇವೆ.

ಮನುಷ್ಯ ಸಾಕಿದ ಅಥವಾ ಕೃಷಿ ಮಾಡಿದ ಬೆಳೆಗಳು, ದನಕರುಗಳು, ನಾಯಿಗಳು, ಕುದುರೆಗಳು ಮುಂತಾದ ಪ್ರಾಣಿಗಳಲ್ಲಿ ಕಂಡು ಬರುವ ವೈವಿಧ್ಯವನ್ನು ನಾಡುಜಾತಿ - ಜೀವ ವೈವಿಧ್ಯ ಎಂದೂ ವಿಭಾಗ ಮಾಡಬಹುದು.

**ಜೀವ ವೈವಿಧ್ಯ ಅವಶ್ಯಕ :**

ಈ ಭೂಮಿಯ ಹಾಗೂ ಮನುಷ್ಯನೂ ಸೇರಿದಂತೆ ಅದರ ಸಕಲ ಜೀವಿಗಳ ಹಿತದೃಷ್ಟಿಯಿಂದ ಜೀವ ವೈವಿಧ್ಯ ಸಮೃದ್ಧವಾಗಿರುವುದು ಅತ್ಯಂತ ಅವಶ್ಯಕ. ಮನುಷ್ಯ ದೃಷ್ಟಿಯಿಂದಲೇ ನೋಡುವುದಾದರೆ, ನಮಗೆ ಬೇಕಾದ ವೈವಿಧ್ಯಮಯ ಆಹಾರಗಳು, ಪೌಷ್ಠಿಕಾಂಶಗಳು, ಆರೋಗ್ಯ ಪೋಷಣೆ ಅಗತ್ಯ, ವಿವಿಧ ಔಷಧಿ ಸಾಮಗ್ರಿಗಳು, ಉಡುಪು, ಕಟ್ಟಡ ಸಾಮಗ್ರಿಗಳು, ಅಲಂಕಾರ ವಸ್ತುಗಳು, ಸಾಗಣಿಕೆ, ಕೃಷಿ, ಕೈಗಾರಿಕೆ ಮುಂತಾದ ಎಲ್ಲಾ ಅಗತ್ಯಗಳ ನಿರಂತರ ಪೂರೈಕೆಗಾಗಿ ಜೀವ ವೈವಿಧ್ಯ ಅತ್ಯವಶ್ಯಕ.

ಅದೇ ರೀತಿ ಇತರ ಎಲ್ಲಾ ಪ್ರಾಣಿ ಪಕ್ಷಿಗಳ ಸಮೃದ್ಧ ಹಾಗೂ ಸುಗಮ ಜೀವನಕ್ಕೆ ಜೀವ ವೈವಿಧ್ಯ ಅತಿ ಅಗತ್ಯ.

ಆದರೆ ಇಂದು ಜಗತ್ತಿನ ಎಲ್ಲಾ ಕಡೆಗಳಲ್ಲಿ ಜೀವ ವೈವಿಧ್ಯ ಅಪಾರ ಹಾನಿಗೆ ಒಳಗಾಗುತ್ತಿದೆ. ಕಳೆದ 200 ವರ್ಷಗಳಲ್ಲಿ ಆರ್ಥಿಕ ಅಭಿವೃದ್ಧಿಯ ಹೆಸರಿನಲ್ಲಿ ಪ್ರಪಂಚದ ಎಲ್ಲಾ ದೇಶಗಳಲ್ಲಿ ಜೀವ ವೈವಿಧ್ಯದ ನಾಶ ವಿಪರೀತ ವೇಗ ಪಡೆಯುತ್ತಿದೆ. ಜೀವ ವೈವಿಧ್ಯದ ಈ ಬೃಹತ್ ನಾಶಕ್ಕೆ ನಾನಾ ಕಾರಣಗಳು. ಏರುತ್ತಿರುವ ಜನಸಂಖ್ಯೆ, ಕೃಷಿ ಭೂಮಿ ವಿಸ್ತರಣೆ, ಗಣಿಗಾರಿಕೆ, ಬೃಹತ್ ನೀರಾವರಿ ಹಾಗೂ ಜಲವಿದ್ಯುತ್ ಯೋಜನೆಗಳ ನಿರ್ಮಾಣ. ಅರಣ್ಯನಾಶ ಅದರಲ್ಲೂ ಮುಖ್ಯವಾಗಿ ಉಷ್ಣವಲಯದ ಮಳೆಕಾಡುಗಳ ನಾಶ, ವನ್ಯಮೃಗಗಳ ಅನಿಯಂತ್ರಿತ ಬೇಟೆ ಹಾಗೂ ಅವುಗಳ ಅಂಗಾಂಗಗಳ ವ್ಯಾಪಾರ. ಆವಾಸಗಳ ನಾಶ, ಜಲಮಾಲಿನ್ಯ, ವಾಯು ಮಾಲಿನ್ಯ, ಅಸ್ಥಿರ - ಭೋಗ ಪ್ರಧಾನ ಜೀವನ ಶೈಲಿ, ಪರಿಸರದ ಬಗ್ಗೆ ಇರುವ ಘೋರ ತಿರಸ್ಕಾರ ಹಾಗೂ ಅಜ್ಞಾನ ಇತ್ಯಾದಿ.

**ಸಂರಕ್ಷಣೆಯ ಕಾಳಜಿ :**

ಪರಿಸರದ ಬಗ್ಗೆ ಹಾಗೂ ಜೀವ ವೈವಿಧ್ಯದ ಬಗ್ಗೆ ಕಾಳಜಿ ನಿಧಾನವಾಗಿಯಾದರೂ ಬೆಳೆಯುತ್ತಿರುವುದು ಸಂತೋಷದ ಸಂಗತಿ. ಜೀವವೈವಿಧ್ಯದ ನಾಶದಿಂದ ಉಂಟಾಗಬಹುದಾದ ಘೋರ ಪರಿಣಾಮಗಳ ಬಗ್ಗೆ ನೂರಾರು ವಿಜ್ಞಾನಿಗಳು ಹಾಗೂ ವೈಜ್ಞಾನಿಕ ಸಂಸ್ಥೆಗಳು ನಿರಂತರ ಸಂಶೋಧನೆಗಳಲ್ಲಿ ನಿರತರವಾಗಿವೆ. ಜೀವ ವೈವಿಧ್ಯದ ಸಂರಕ್ಷಣೆ ಬಗ್ಗೆ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸಮ್ಮೇಳನಗಳು ನಡೆಯುತ್ತಿವೆ. ಇವುಗಳಲ್ಲಿ ಬಹಳ ಮುಖ್ಯವಾದದ್ದು 1992ರ ಜೂನ್‌ನಲ್ಲಿ ರಯೋ ಡಿ ಜನೇರೋದಲ್ಲಿ ನಡೆದ ಪರಿಸರ ಮತ್ತು ಅಭಿವೃದ್ಧಿ ಕುರಿತ ವಿಶ್ವಸಂಸ್ಥೆಯ ಸಮ್ಮೇಳನ. ಅದನ್ನು 'ಭೂ ಸಮ್ಮೇಳನ' ಎಂದೂ ಕರೆಯುತ್ತಾರೆ. ಪ್ರಪಂಚದ 160ಕ್ಕಿಂತಲೂ ಹೆಚ್ಚು ದೇಶಗಳ ರಾಜಕೀಯ ಧುರೀಣರು, ಹಿರಿಯ ಅಧಿಕಾರಿಗಳು, ವಿಜ್ಞಾನಿಗಳು ಹಾಗೂ ಸ್ವಯಂ ಸೇವಾ ಸಂಘಗಳು ಈ ಸಮ್ಮೇಳನದಲ್ಲಿ ಭಾಗವಹಿಸಿ ಭೂಮಿಯ ಪರಿಸರದ ಬಗ್ಗೆ ಜೀವ ವೈವಿಧ್ಯ ಸಂರಕ್ಷಣೆ ಬಗ್ಗೆ ವ್ಯಾಪಕವಾಗಿ ಚರ್ಚಿಸಿದರು. ಅದರ ಫಲವಾಗಿ ಮೂಡಿ ಬಂದದ್ದು - ಜೀವ ವೈವಿಧ್ಯ ಸಂರಕ್ಷಣೆಗೆ ಒಪ್ಪಂದ. (ಕನ್‌ವೆನ್ಷನ್ ಆನ್ ಬಯೋಲಾಜಿಕಲ್ ಡೈವರ್ಸಿಟಿ) ಪ್ರಪಂಚದ ಬಹುಪಾಲು ರಾಷ್ಟ್ರಗಳು ಈ ಒಪ್ಪಂದಕ್ಕೆ ಸಹಿ ಮಾಡುವುದರ ಮೂಲಕ ತಮ್ಮ ತಮ್ಮ ದೇಶಗಳಲ್ಲಿ ಜೀವ ವೈವಿಧ್ಯ ಸಂರಕ್ಷಣೆಗೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವುದಾಗಿ ಒಪ್ಪಿಕೊಂಡಿವೆ. ಜೀವ ವೈವಿಧ್ಯ - ಒಪ್ಪಂದಕ್ಕೆ ಭಾರತವೂ ಸಹಿ ಮಾಡಿರುವುದರಿಂದ ಭಾರತ ದೇಶದ ನೆಲ - ಜಲಗಳ ಜೀವ ವೈವಿಧ್ಯ ಸಂರಕ್ಷಣೆ ಮಾಡುವುದು ಭಾರತ ಸರ್ಕಾರದ ಕರ್ತವ್ಯವಾಗಿದೆ.

**ಭಾರತದಲ್ಲಿ ಜೀವ ವೈವಿಧ್ಯ ಪರಿಸ್ಥಿತಿ :**

ಇಡೀ ಪ್ರಪಂಚದಲ್ಲಿ ಜೀವ ವೈವಿಧ್ಯ ಅತ್ಯಂತ ಸಮೃದ್ಧವಾಗಿರುವ 18 ಪ್ರದೇಶಗಳನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಅವುಗಳನ್ನು ಬೃಹತ್ ಜೀವ ವೈವಿಧ್ಯ ಪ್ರದೇಶಗಳು ಎಂದು ಕರೆಯಲಾಗುತ್ತದೆ. ಅವುಗಳಲ್ಲಿ 2 ಪ್ರದೇಶಗಳು ಭಾರತದಲ್ಲೇ ಇವೆ. ಅವು 1) ಪಶ್ಚಿಮ ಘಟ್ಟಗಳು ಮತ್ತು 2) ಪೂರ್ವ ಹಿಮಾಲಯ ಪ್ರದೇಶ. ಭಾರತದಲ್ಲಿ ವನ್ಯ-ಜೀವ ವೈವಿಧ್ಯ ಸಮೃದ್ಧವಾಗಿರುವುವಂತೆಯೇ ಕೃಷಿ ಜೀವ ವೈವಿಧ್ಯವೂ ಹೇರಳವಾಗಿದೆ. ಆದರೆ ಪ್ರಪಂಚದ ಇತರ ದೇಶಗಳಂತೆ, ಭಾರತದಲ್ಲೂ ಜೀವ ವೈವಿಧ್ಯ ವೇಗವಾಗಿ ನಾಶವಾಗುತ್ತಿದೆ. ಆದ್ದರಿಂದ ಭಾರತದಲ್ಲೂ ಜೀವ ವೈವಿಧ್ಯದ ಸಂರಕ್ಷಣೆಗೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

**ರಾಷ್ಟ್ರೀಯ ಜೀವ ವೈವಿಧ್ಯ ಕಾರ್ಯತಂತ್ರ ಕ್ರಿಯಾ ಯೋಜನೆ :**

ಕೇಂದ್ರ ಸರ್ಕಾರದ ಅರಣ್ಯ ಹಾಗೂ ಪರಿಸರ ಸಚಿವಾಲಯವು ಭಾರತದ ಜೀವ ವೈವಿಧ್ಯದ ಸಂರಕ್ಷಣೆಗಾಗಿ ಒಂದು ವ್ಯಾಪಕ ಯೋಜನೆಯನ್ನು ಸಿದ್ಧಪಡಿಸುವ ಕಾರ್ಯಕ್ಕೆ ಕೈ ಹಾಕಿದೆ. ಅದರ

ಹೆಸರು ರಾಷ್ಟ್ರೀಯ ಜೀವ ವೈವಿಧ್ಯ ಕಾರ್ಯತಂತ್ರ ಮತ್ತು ಕ್ರಿಯಾ ಯೋಜನೆ (ನ್ಯಾಷನಲ್ ಬಯೋಡೈವರ್ಸಿಟಿ ಸ್ಟ್ರಾಟಜಿ ಆಂಡ್ ಆಕ್ಷನ್ ಪ್ಲಾನ್) ಈ ರಾಷ್ಟ್ರೀಯ ಸಂರಕ್ಷಣಾ ಯೋಜನೆಯ ಮುಖ್ಯ ಉದ್ದೇಶಗಳೆಂದರೆ 1) ಜೀವ ವೈವಿಧ್ಯದ ಸಂರಕ್ಷಣೆ 2) ಸುಸ್ಥಿರ ಬಳಕೆ ಮತ್ತು 3) ಅದರಿಂದ ದೊರೆಯುವ ಲಾಭಗಳ ಸಮಾನ ಹಂಚಿಕೆ.

ಈ ರಾಷ್ಟ್ರೀಯ ಸಂರಕ್ಷಣಾ ಯೋಜನೆಯನ್ನು ವ್ಯಾಪಕವಾದ ಜನಗಳ ಭಾಗವಹಿಸುವಿಕೆ, ಅವರ ಅನುಭವಗಳು, ಸಲಹೆ ಮತ್ತು ಸೂಚನೆಗಳ ಆಧಾರದ ಮೇಲೆ ರಚಿಸಬೇಕೆಂಬುದು ಸಚಿವಾಲಯದ ಉದ್ದೇಶ.

ವಿವಿಧ ರಾಜ್ಯಗಳ ಜೀವ ವೈವಿಧ್ಯ ಕಾರ್ಯತಂತ್ರ ಮತ್ತು ಕ್ರಿಯಾ ಯೋಜನೆಗಳ ಆಧಾರದ ಮೇಲೆ ರಾಷ್ಟ್ರೀಯ ಕಾರ್ಯಯೋಜನೆಯನ್ನು ಸಿದ್ಧಗೊಳಿಸಬೇಕಾಗುತ್ತದೆ.

ಅದಕ್ಕಾಗಿ ಮೊದಲ ಹಂತದಲ್ಲಿ ರಾಜ್ಯ ಮಟ್ಟದಲ್ಲಿ ಕಾರ್ಯ ಯೋಜನೆಯನ್ನು ಸಿದ್ಧಗೊಳಿಸುವುದು ಅಗತ್ಯ.

**ಕರ್ನಾಟಕ ಜೀವ ವೈವಿಧ್ಯ ಕಾರ್ಯತಂತ್ರ ಮತ್ತು ಕ್ರಿಯಾ ಯೋಜನೆ :**

ಕರ್ನಾಟಕ ರಾಜ್ಯ ಮಟ್ಟದ ಕ್ರಿಯಾ ಯೋಜನೆಯನ್ನು ಸಿದ್ಧಗೊಳಿಸುವ ಜವಾಬ್ದಾರಿಯನ್ನು ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ಪರಿಸರ ವಿಜ್ಞಾನಗಳ ಕೇಂದ್ರಕ್ಕೆ ವಹಿಸಿಕೊಡಲಾಯಿತು. ಈ ಕೇಂದ್ರವು ಕರ್ನಾಟಕ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾದ ಮಾರ್ಗದರ್ಶಿ ಸಮಿತಿಯ ಒಟ್ಟಾರೆ ಸಲಹೆ ಸೂಚನೆಗಳ ಮೇರೆಗೆ ಕೆಲಸ ನಿರ್ವಹಿಸಿತು.

ರಾಜ್ಯದ ಮಹಾಜನತೆಯ ಅಭಿಪ್ರಾಯಗಳನ್ನು ಸಂಗ್ರಹಿಸುವುದಕ್ಕಾಗಿ ಕೇಂದ್ರವು 4 ವಿಧಾನಗಳನ್ನು ಅನುಸರಿಸಿತು.

1) ತಾಂತ್ರಿಕ ಪರಿಣಿತರು ಮತ್ತು ಆಡಳಿತಗಾರರಿಂದ ವಿಶೇಷ ಲೇಖನಗಳನ್ನು ಕೋರಿ ಬರೆಸುವುದು.

2) ಸ್ವಯಂ ಸೇವಾ ಸಂಸ್ಥೆಗಳ ಮೂಲಕ, (Case studies) ಕ್ಷೇತ್ರ - ಅಧ್ಯಯನಗಳನ್ನು ಏರ್ಪಡಿಸುವುದು.

3) ರಾಜ್ಯಾದ್ಯಂತ ಆರಿಸಿದ 49 ಪ್ರೌಢ ಶಾಲೆಗಳ ಸಹಾಯದಿಂದ, ಸ್ಥಳೀಯ ಜನ ಸಮುದಾಯಗಳನ್ನು ಒಳಗೊಂಡ ಕ್ಷೇತ್ರ ಅಧ್ಯಯನಗಳನ್ನು ನಡೆಸುವುದು.

4) ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾದ ಹಿನ್ನಲೆ ಲೇಖನಗಳು ಮತ್ತು ಆಕಾಶವಾಣಿಯು ಬಿತ್ತರಿಸಿದ 14 ಕಂತುಗಳ 'ಧರೆಯ ಸಿರಿ' ಎಂಬ ಕಾರ್ಯಕ್ರಮದ ಬಗ್ಗೆ ಓದುಗರು ಮತ್ತು ಕೇಳುಗರ ಅನಿಸಿಕೆಗಳನ್ನು ಪಡೆದುಕೊಳ್ಳುವುದು.

ಜೀವ ವೈವಿಧ್ಯ ಎಂಬುದು ತುಂಬಾ ವ್ಯಾಪಕ ವಿಷಯವಾದ್ದರಿಂದ, ಜನಗಳ ಗಮನ ಕೇಂದ್ರೀಕರಿಸುವುದಕ್ಕಾಗಿ 6 ವಿಷಯಗಳನ್ನು ಆರಿಸಲಾಯಿತು. ಅವುಗಳೆಂದರೆ

1) ಸಂರಕ್ಷಿತ ಪ್ರದೇಶಗಳು
2) ಔಷಧೀಯ ಸಸ್ಯಗಳು
3) ಸಿಹಿ ನೀರು ಮೀನುಗಳು
4) ಜೌಗು ಭೂಮಿಗಳು
5) ಸಂರಕ್ಷಣೆಯ ಸಾಂಸ್ಕೃತಿಕ ಪರಂಪರೆಗಳು ಮತ್ತು
6) ಬೆಳೆ ವೈವಿಧ್ಯಗಳು

ಪಡೆಯಲಾದ ಎಲ್ಲಾ ಜನಾಭಿಪ್ರಾಯಗಳನ್ನು ರಾಜ್ಯ ಮಟ್ಟದ 6 ವಿಷಯಾಧಾರಿತ ಕಾರ್ಯಾಗಾರಗಳಿಗೆ ಪೂರೈಸಲಾಯಿತು. ಸಮಾಜದ ವಿವಿಧ ವರ್ಗಗಳು ಪ್ರತಿನಿಧಿಗಳನ್ನೊಳಗೊಂಡ ಈ ಕಾರ್ಯಾಗಾರಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ನಡೆದವು. ಅಂತಿಮವಾಗಿ 2001ರ ನವೆಂಬರ್ 11ರಂದು ನಡೆದ ರಾಜ್ಯಮಟ್ಟದ ಸಮಾವೇಶದಲ್ಲಿ ಕರ್ನಾಟಕ ಜೀವ ವೈವಿಧ್ಯ ಕಾರ್ಯತಂತ್ರ ಮತ್ತು ಕ್ರಿಯಾ ಯೋಜನೆಯ ಅಂತಿಮ ಕರಡನ್ನು ಜನತೆಯ ಮುಂದೆ ಮಂಡಿಸಲಾಯಿತು. ಅದರ ಸಂಕ್ಷಿಪ್ತ ರೂಪ ನಿಮ್ಮ ಮುಂದಿದೆ.

✦ ✦ ✦

## ಕರ್ನಾಟಕ ರಾಜ್ಯ ಜೀವವೈವಿಧ್ಯ ಕಾರ್ಯತಂತ್ರ ಮತ್ತು ಕ್ರಿಯಾಯೋಜನೆ

### ಪ್ರಮುಖ ಆತಂಕಗಳು

- ಕೇವಲ ಧ್ವಜರೂಪಿ ಪ್ರಭೇದಗಳತ್ತ ಕೇಂದ್ರೀಕರಿಸದೆ ಜೀವವೈವಿಧ್ಯತೆಯ ಎಲ್ಲಾ ಸ್ವರೂಪಗಳ ಮೇಲೂ ಗಮನ ಹರಿಸುವ ಅವಶ್ಯಕತೆ :

  ಸಂರಕ್ಷಣಾ ಚಟುವಟಿಕೆಗಳನ್ನು ಕೇವಲ ಹುಲಿ ಮತ್ತು ಆನೆಗಳಂತಹ ಪ್ರಮುಖ ಪ್ರಭೇದಗಳತ್ತ ಸಾಂಪ್ರದಾಯಿಕ ರೀತಿಯಲ್ಲಿ ಸೀಮಿತಗೊಳಿಸದೆ ಸಮಗ್ರ ಸೂಕ್ಷ್ಮಜೀವಿಗಳ, ಸಸ್ಯ ಹಾಗೂ ಪ್ರಾಣಿಗಳ ವೈವಿಧ್ಯತೆಯತ್ತ ಹೆಚ್ಚು ಗಮನಹರಿಸುವ ಅವಶ್ಯಕತೆಯಿದೆ.

  ಪಶ್ಚಿಮ ಘಟ್ಟ ಪ್ರದೇಶಗಳಲ್ಲಿರುವ ಸೂಕ್ಷ್ಮ ಸಂವೇದನಾ ಮಿರಿಸ್ಟಿಕಾ ಜೌಗು ಭೂಮಿಯಲ್ಲಿರುವ ವಿಶೇಷ ಸಮುದಾಯಗಳತ್ತ ನಾವು ಗಮನಹರಿಸಬೇಕಾಗಿದೆ. ಮಾನವನ ಚಟುವಟಿಕೆಗಳಿಂದಾಗಿ ಇಂತಹ ಅಪರೂಪದ ಹಾಗೂ ಅಪೂರ್ವ ಪ್ರಭೇದಗಳು ತೀವ್ರ ಅಪಾಯದಂಚಿನಲ್ಲಿವೆ ಹಾಗೂ ಒತ್ತಡವನ್ನು ಸಹಿಸಲಾರದೆ ಕಣ್ಮರೆಯಾಗುತ್ತಿವೆ. ಅಂತಹ ಪ್ರದೇಶಗಳನ್ನು ಮಾನವ ಚಟುವಟಿಕೆಗಳಿಗೆ ಮುಚ್ಚುವ ಅವಶ್ಯಕತೆಯಿದೆ.

- ಪ್ರಮುಖ ಜೀವವೈವಿಧ್ಯದ ಭಂಡಾರವಾಗಿರುವ ರಕ್ಷಿತ ಪ್ರದೇಶಗಳತ್ತ ಗಮನಹರಿಸುವ ಅವಶ್ಯಕತೆ :

  ಅರಣ್ಯ ಹಾಗೂ ಜೀವವೈವಿಧ್ಯ ಸಂರಕ್ಷಣೆಯಲ್ಲಿ ಬೆಂಕಿ ಒಂದು ಪ್ರಮುಖ ಅಪಾಯವಾಗಿದೆ. ಜೀವವೈವಿಧ್ಯವನ್ನು ಬೆಂಕಿಯ ಹಾನಿಯಿಂದ ಮುಕ್ತಗೊಳಿಸಲು ಸೂಕ್ಷ್ಮ ಸಂವೇದನಾ ಆವಾಸಗಳ ರಕ್ಷಣೆ ಹಾಗೂ ನಿರ್ವಹಣೆಯನ್ನು ಬಲಪಡಿಸುವ ಅವಶ್ಯಕತೆಯಿದೆ.

- ರಕ್ಷಿತ ಪ್ರದೇಶಗಳ ಸಂಪರ್ಕಿಸುವಿಕೆ :

  ರಕ್ಷಿತ ಪ್ರದೇಶಗಳು ವಿಶೇಷವಾಗಿ ತುಂಡುತುಂಡಾಗಿರುವುದರಿಂದ ಅನುವಂಶಿಕ ಜೀವಿಗಳ ಪ್ರತ್ಯೇಕತೆಗೆ ಕಾರಣವಾಗಿ ಅನುವಂಶಿಕವಾಗಿಯೂ ಬೇರ್ಪಟ್ಟಿವೆ. ಆದುದರಿಂದ, ತುಂಡು ತುಂಡಾಗಿರುವ ರಕ್ಷಿತ ಪ್ರದೇಶಗಳ ಜೀವಪರಿಸರ ಇಲ್ಲವೆ ಆವಾಸಗಳನ್ನು ಕಿರುದಾರಿಗಳ ಮೂಲಕ ಸಂಪರ್ಕಿಸುವ ಅವಶ್ಯಕತೆಯಿದೆ.

- ರಕ್ಷಿತ ಪ್ರದೇಶಗಳನ್ನು ಮೀರಿ ಸಮಗ್ರ ಭೂಹರವು ಹಾಗೂ ಜಲಹರವಿನತ್ತ ಹೋಗುವ ಅವಶ್ಯಕತೆ :

ಪ್ರಸ್ತುತ ಸಂರಕ್ಷಣಾ ಪ್ರಯತ್ನಗಳು ಧ್ವಜರೂಪಿ ಪ್ರಭೇದಗಳತ್ತ ಸೀಮಿತವಾಗಿರುವುದರಿಂದ, ಒಂದು ನಿಗದಿತ ಪ್ರದೇಶದಲ್ಲಿ ಅವುಗಳನ್ನು ಸುತ್ತುವರಿದ ಇತರ ಪ್ರಭೇದಗಳು ಕಣ್ಮರೆಯಾಗುವುದಕ್ಕೆ ಕಾರಣವಾಗಿದೆ. ಸಂರಕ್ಷಣಾ ಒಳಿತುಗಳನ್ನು ಗರಿಷ್ಠಗೊಳಿಸಲು ಭೂಹರವಿನ ಮಟ್ಟದಲ್ಲಿ ಹಾಗೂ ಆವಾಸಗಳ ಮಟ್ಟದಲ್ಲಿ ಜೀವವೈವಿಧ್ಯ ನಿರ್ವಹಣಾ ಯೋಜನೆ ಮತ್ತು ತಂತ್ರಗಾರಿಕೆಗಳನ್ನು ಅಭಿವೃದ್ಧಿಗೊಳಿಸುವ ವ್ಯೂಹವನ್ನು ಹಮ್ಮಿಕೊಳ್ಳುವ ಅವಶ್ಯಕತೆಯಿದೆ. ಗಾಢವಾದ ಸಂರಕ್ಷಣಾ ಪ್ರಯತ್ನಗಳ ಮೂಲಕ ಸಸ್ಯ ಹಾಗೂ ಪ್ರಾಣಿಗಳಿಂದೊಡಗೂಡಿದ ಸಮೃದ್ಧ ಜೀವವೈವಿಧ್ಯ ಭೂಹರವುಗಳನ್ನು ಸಂರಕ್ಷಿಸುವ ಅವಶ್ಯಕತೆಯಿದ್ದರೂ ಪ್ರತಿಯೊಂದು ಪ್ರದೇಶವನ್ನು ವನ್ಯಧಾಮಗಳೆಂದು ಅಥವಾ ರಾಷ್ಟ್ರೀಯ ವನಾವರಣವೆಂದು ಘೋಷಿಸುವುದು ಅಸಾಧ್ಯ. ಬದಲಾಗಿ, ಇಂತಹ ಪ್ರದೇಶಗಳನ್ನು ಜೀವಪರಿಸರ ಸಂವೇದನಾ ಪ್ರದೇಶಗಳೆಂದು ಘೋಷಿಸಬಹುದಾಗಿದೆ.

- ಉಪೇಕ್ಷೆಗೊಳಗಾಗಿರುವ ಜೀವಪರಿಸರಗಳತ್ತ ಗಮನವನ್ನು ಕೇಂದ್ರೀಕರಿಸುವ ಅವಶ್ಯಕತೆ :

ಈವರೆಗಿನ ಸಂರಕ್ಷಣಾ ಪ್ರಯತ್ನಗಳು ಪಶ್ಚಿಮ ಘಟ್ಟಗಳ ಅರಣ್ಯ ಪ್ರದೇಶಗಳತ್ತ ಕೇಂದ್ರೀಕೃತವಾಗಿವೆ. ದಖ್ಖಣದ ಪ್ರಸ್ಥಭೂಮಿಯಲ್ಲಿರುವ, ಮುಖ್ಯವಾಗಿ ಹತ್ತಿ ಬೆಳೆಯುವ ಕಪ್ಪು ಮಣ್ಣಿನ ಪ್ರದೇಶಗಳಂತಹ ನಿಸರ್ಗ ಸಂಪನ್ಮೂಲಗಳ ಪರಿಸರದ ಬೇಡಿಕೆಗಳತ್ತ, ಕೃಷಿ ಜೀವಪರಿಗಳತ್ತ ಹಾಗೂ ರೈತರ ಜೀವನದ ಅವಶ್ಯಕತೆಗಳತ್ತ ಹೆಚ್ಚು ಗಮನ ಹರಿಸುವ ಅವಶ್ಯಕತೆಯಿದೆ.

- ನಿಯಂತ್ರಣಾ ಕ್ರಮಗಳನ್ನು ಮೀರಿ ವಿವಿಧ ರಾಜನೀತಿ (ಕಾರ್ಯನೀತಿ) ಸಾಧನಗಳನ್ನು ಯೋಜಿಸುವ ಅವಶ್ಯಕತೆ :

ಮಾನವನ ಚಟುವಟಿಕೆಗಳ ಒತ್ತಡದಿಂದ ಸಸ್ಯ, ಪ್ರಾಣಿ ಹಾಗೂ ಅರಣ್ಯ ಜೀವವೈವಿಧ್ಯ ಸಂರಕ್ಷಣೆಗೆ ಹೆಚ್ಚಿನ ಅಪಾಯ ಬಂದೊದಗಿದೆ. ತಮ್ಮ ಜೀವನಾವಶ್ಯಕತೆಗಳನ್ನು ಪೂರೈಸಲು ಸಮುದಾಯವು ಅರಣ್ಯ ಸಂಪನ್ಮೂಲಗಳನ್ನು ಗೊತ್ತುಗುರಿಯಿಲ್ಲದೆ ಬಳಸುವುದೇ ಪ್ರಮುಖ ಆತಂಕಕ್ಕೆ ಕಾರಣವಾಗಿದೆ. ಈ ಸಮಸ್ಯೆಯನ್ನು ಸಮಗ್ರ ರೀತಿಯಲ್ಲಿ ಎದುರಿಸತಕ್ಕದ್ದು. ಅರಣ್ಯ ಸಂಪನ್ಮೂಲಗಳ ಮೇಲಿನ ಒತ್ತಡವನ್ನು ತಗ್ಗಿಸಲು ಪರ್ಯಾಯ ಜೀವನಾವಶ್ಯ ಬೇಡಿಕೆಗಳನ್ನು ಪೂರೈಸುವತ್ತ ಹೆಚ್ಚಿನ ಗಮನ ಹರಿಸಬೇಕಾಗಿದೆ. ಪ್ರಸ್ತುತ ಇರುವ ರಕ್ಷಿತ ಪ್ರದೇಶಗಳನ್ನು ನೋಡಿಕೊಳ್ಳುವ ಕಾಯಿದೆಗಳು ಸಮರ್ಪಕವಾಗಿಲ್ಲ ಮತ್ತು ಪರಿಸರದ ಅಭಿವೃದ್ಧಿ ಹಾಗೂ ಸಹಭಾಗಿತ್ವದತ್ತ ಹೆಚ್ಚು ಗಮನ ಹರಿಸಿಲ್ಲ. ಆದುದರಿಂದ ರಕ್ಷಿತ ಪ್ರದೇಶಗಳ ನಿರ್ವಹಣೆಯನ್ನು ಸಹಭಾಗಿತ್ವ ನಿರ್ವಹಣೆಯ ನಿಯಂತ್ರಣದತ್ತ ಗುರಿಪಡಿಸಬೇಕಾಗಿದೆ. ಪ್ರಸ್ತುತ ರಕ್ಷಿತ ಪ್ರದೇಶಗಳ ನಿರ್ವಹಣೆಯ ಕಾಯಿದೆಗಳು ಮಾನವ

- ಪ್ರಾಣಿಗಳ ನಡುವಿನ ಸಂಘರ್ಷಗಳನ್ನು ಸಾಕಷ್ಟು ಗಮನಕ್ಕೆ ತೆಗೆದುಕೊಂಡಿಲ್ಲ. ಆದುದರಿಂದ ಜೈವಿಕ ಸಂಪನ್ಮೂಲಗಳ ಉತ್ಪತ್ತಿಯನ್ನು ಅಧಿಕಗೊಳಿಸುವ ಹಾಗೂ ಸ್ಥಳೀಯ ಜೈವಿಕ ಸಂಪನ್ಮೂಲಗಳ ಬಳಕೆಯನ್ನು ಸುಸ್ಥಿರವಾಗಿ ಬಳಸುವ ಅಭ್ಯಾಸಗಳತ್ತ ಗಮನಹರಿಸಿ ಕಾರ್ಯತಂತ್ರವನ್ನು ರೂಪಿಸಬೇಕಾಗಿದೆ.

- ಸಂರಕ್ಷಣೆ ಹಾಗೂ ಸುಸ್ಥಿರ ಬಳಕೆಯ ಮಾರ್ಗೋಪಾಯಗಳನ್ನು ಒಟ್ಟುಗೂಡಿಸುವ ಅವಶ್ಯಕತೆ :

  ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅನೇಕ ಸಸ್ಯ-ಪ್ರಾಣಿ ಪ್ರಭೇದಗಳಿಗೆ ಅತ್ಯಧಿಕ ವಾಣಿಜ್ಯ ಮೌಲ್ಯವಿದೆ. ಕೆಲವೊಂದು ಅಪರೂಪದ ಔಷಧೀಯ ಸಸ್ಯಗಳನ್ನು ವಿವೇಚನೆಯಿಲ್ಲದೆ ತೆಗೆದು ರಹಸ್ಯವಾಗಿ ರಫ್ತು ಮಾಡಲಾಗುತ್ತಿದೆ. ಆದುದರಿಂದ ಜೀವವೈವಿಧ್ಯ ಸಂರಕ್ಷಣಾ ಕಾರ್ಯತಂತ್ರವು ಇಂತಹ ಅಪರೂಪದ ಪ್ರಭೇದಗಳ ವಾಣಿಜ್ಯಿಕ ಬಳಕೆಯನ್ನು ನಿರ್ಬಂಧಿಸುವತ್ತ ಸಾಗಬೇಕಾಗಿದೆ.

- ವಿವಿಧ ವಿಭಾಗಗಳ ಸಂಯೋಜನೆಯನ್ನು ನಿಶ್ಚಿತಗೊಳಿಸುವ ಅವಶ್ಯಕತೆ :

  ಜೀವವೈವಿಧ್ಯಕ್ಕೆ ಒದಗಿದ ಪ್ರಮುಖ ಅಪಾಯಗಳಲ್ಲಿ ಹುಲ್ಲು ಮೇಯುವುದು ಒಂದಾಗಿದೆ. ಜಾನುವಾರುಗಳ ನಿರಂತರ ಮೇಯುವಿಕೆಯಿಂದಾಗಿ, ಅವುಗಳ ಪುನರ್ ನಿರ್ಮಾಣಕ್ಕೆ ಪೂರ್ತಿ ಧಕ್ಕೆಯೊದಗಿದೆ. ಮೇಕೆಗಳು ಅರಣ್ಯಗಳ ಪುನರ್ ನಿರ್ಮಾಣಕ್ಕೆ ಅತ್ಯಂತ ದೊಡ್ಡ ಅಪಾಯವಾಗಿದೆ. ಆದುದರಿಂದ ಜೀವವೈವಿಧ್ಯ ಸಂರಕ್ಷಣೆಯನ್ನು ಜಾನುವಾರುಗಳ ನಿರ್ವಹಣೆಯ ನೀತಿಯೊಂದಿಗೆ ಜೋಡಿಸುವ ಅವಶ್ಯಕತೆಯಿದೆ.

- ಜೀವವೈವಿಧ್ಯದ ಆತಂಕಗಳನ್ನು ಅಭಿವೃದ್ಧಿಯ ಪ್ರಕ್ರಿಯೆಗಳೊಂದಿಗೆ ಒಗ್ಗೂಡಿಸುವ ಅವಶ್ಯಕತೆ :

  ಅರಣ್ಯಗಳ ಸುತ್ತಮುತ್ತ ನಡೆಯುತ್ತಿರುವ ಗಣಿಗಾರಿಕೆ ಮತ್ತು ಬಂಡೆಯೊಡೆಯುವ ಚಟುವಟಿಕೆಗಳು ಜೀವವೈವಿಧ್ಯಕ್ಕೆ ಸರಿಪಡಿಸಲಾಗದಂತಹ ಹಾನಿಯನ್ನು ತಂದೊಡ್ಡುತ್ತಿದೆ. ಒಂದು ಸರಿಯಾದ ನೀತಿಯ ಆಧಾರದ ಮೂಲಕ ಇಂತಹ ಸಮಸ್ಯೆಗಳನ್ನು ಜೀವವೈವಿಧ್ಯ ಕಾರ್ಯತಂತ್ರ ಹಾಗೂ ಕ್ರಿಯಾಯೋಜನೆಯಡಿಯಲ್ಲಿ ಇತ್ಯರ್ಥಗೊಳಿಸುವ ಅವಶ್ಯಕತೆಯಿದೆ. ಅದೇ ವೇಳೆಯಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಅವಸರವಿರುವುದನ್ನು ಅಭಿವೃದ್ಧಿಯ ಅನಿವಾರ್ಯತೆ ಎಂದು ಮನದಟ್ಟು ಮಾಡಬೇಕಾಗಿದೆ.

- ಜಾಗ್ರತೆಯ ತತ್ವವನ್ನು ಜಾರಿಗೊಳಿಸುವ ಅವಶ್ಯಕತೆ :

  ವಂಶವಾಹಿ ಪರಿವರ್ತಿತ ಜೀವಿಗಳು ಮುಂತಾದ ನೂತನ ಪರಿಸ್ಥಿತಿಗಳನ್ನು ಎದುರಿಸುವಾಗ ತೆಗೆದುಕೊಳ್ಳಬೇಕಾದ ಜಾಗ್ರತೆಗಳ ಬಗ್ಗೆ ಈ ತತ್ವ ಬೆಳಕು ಚೆಲ್ಲುತ್ತದೆ, ಅವುಗಳ ಒಟ್ಟಾರೆ

ಪರಿಣಾಮಗಳ ಬಗ್ಗೆ ನಮ್ಮಲ್ಲಿ ಸರಿಯಾದ ಸಾಕ್ಷ್ಯಾಧಾರಗಳಿಲ್ಲ. ಅಂತಹ ಪರಿಸ್ಥಿತಿಗಳಲ್ಲಿ ಅತಿ ಜಾಗ್ರತೆಯಿಂದಾಗಿ ವ್ಯವಹರಿಸುವ ಅವಶ್ಯಕತೆಯಿದೆ. ಆದಾಗ್ಯೂ ಜಗತ್ತಿನ ವಿವಿದೆಡೆಗಳಲ್ಲಿ, ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ವಂಶಪರಿವರ್ತಿತ ಜೀವಿಗಳ ಬಗ್ಗೆ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಗಮನಿಸಬೇಕಾಗಿದೆ.

- ಹೊಲಸು ಮಾಡುವವನೇ ಖರ್ಚು ಭರಿಸುವ ತತ್ವವನ್ನು ಜಾರಿಗೊಳಿಸುವ ಅವಶ್ಯಕತೆ :

  ಜೀವವೈವಿಧ್ಯ ಸಂರಕ್ಷಣೆಗೆ ತಗಲುವ ವೆಚ್ಚವನ್ನು ಯಾರು ಪರಿಸರವನ್ನು ವಿವಿಧ ಹಾನಿಕಾರಕ ಚಟುವಟಿಕೆಗಳ ಮೂಲಕ ಮಲಿನಗೊಳಿಸುವರೋ ಅವರೇ ಅದನ್ನು ಭರಿಸುವಂತೆ ನೋಡಿಕೊಳ್ಳಬೇಕಾಗಿದೆ.

- ನೂತನವಾಗಿ ಹೊರ ಹೊಮ್ಮುತ್ತಿರುವ ವಂಶವಾಹಿ ಪರಿವರ್ತಿತ ಜೀವಿಗಳು, ಬೌದ್ಧಿಕ ಆಸ್ತಿಯ ಹಕ್ಕುಗಳು ಮುಂತಾದವುಗಳ ಸವಾಲುಗಳನ್ನೆದರಿಸುವ ಅವಶ್ಯಕತೆ :

  ಉತ್ಪಾದನೆಯನ್ನು ಹೆಚ್ಚಿಸುವ ಅಭಿವೃದ್ಧಿಯ ಅನಿವಾರ್ಯತೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಇಂತಹ ಸವಾಲುಗಳನ್ನು ಎದುರಿಸುವಾಗ ಒಂದು ಸಮತೋಲನವಾದ ವಿಧಾನವನ್ನು ಅಳವಡಿಸುವುದು ಅತ್ಯವಶ್ಯವಾಗಿದೆ.

## ಕಾರ್ಯತಂತ್ರ ಮತ್ತು ಕ್ರಿಯಾಯೋಜನೆ

**ಕಾರ್ಯತಂತ್ರ - ೧** ವಿಸ್ತಾರಗೊಳ್ಳುತ್ತಿರುವ ಮತ್ತು ಉತ್ತಮಗೊಳ್ಳುತ್ತಿರುವ ಜೀವವೈವಿಧ್ಯದ ಗುಣಲಕ್ಷಣಗಳ ಜ್ಞಾನ ಹಾಗೂ ಅದರ ಉಪಯೋಗ ಮತ್ತು ಮೌಲ್ಯಗಳು.

- ಜೀವಿಗಳ ಗುಂಪುಗಳ ಬಗ್ಗೆ, ಸ್ಥಳಗಳ ಬಗ್ಗೆ, ಜನ - ಜೀವವೈವಿಧ್ಯತೆಯ ಪರಸ್ಪರ ವರ್ತನೆಗಳ ಬಗ್ಗೆ, ಹಾಲಿ ಬದಲಾವಣೆಗಳ ಬಗ್ಗೆ, ಬದಲಾವಣೆಯ ಚಾಲಕ ಶಕ್ತಿಗಳ ಬಗ್ಗೆ ಸದ್ಯದಲ್ಲಿರುವ ತಿಳುವಳಿಕೆ ತುಂಬಾ ಸೀಮಿತವಾಗಿದೆ.

- ವೈಜ್ಞಾನಿಕ ಮತ್ತು ಜನಪದೀಯ ಜ್ಞಾನವನ್ನು ಒಟ್ಟಿಗೆ ಸೇರಿಸುವ ಸಾಧನದ ಅಲಭ್ಯತೆ
- ಹಾಲಿ ನಡೆಯುತ್ತಿರುವ ಬದಲಾವಣೆಗಳ ಬಗ್ಗೆ ನಿಗಾವಣೆಯ ಸಾಧನಗಳ ಅಲಭ್ಯತೆ
- ವಂಶವಾಹಿ ರೂಪಾಂತರಿತ ಜೀವಿಗಳ ಬಿಡುಗಡೆಯ ಪರಿಣಾಮ ರೂಪವಾಗಿ ವಿಶಿಷ್ಠ ವಂಶವಾಹಿಗಳ ರೂಪದಲ್ಲಿ ಹೊರ ಹೊಮ್ಮುತ್ತಿರುವ ಹೊಸ ಸವಾಲುಗಳನ್ನೆದುರಿಸಲು ಯಾವುದೇ ಸಾಧನಗಳಿಲ್ಲದಿರುವುದು.

- ಮಾಹಿತಿ ತಂತ್ರಜ್ಞಾನದ ಆಧುನಿಕ ಸಾಧನಗಳನ್ನು ಅಗಾಧವಾಗಿ ಬಳಸಲು ವಿಫುಲ ಅವಕಾಶಗಳು.

## ಕ್ರಿಯಾಯೋಜನೆಗಳು - ೧

ಸೂಚಿತವಾದ ಕಾರ್ಯಕ್ರಮಗಳು, ಕ್ರಿಯಾಯೋಜನೆಗಳು ಮತ್ತು ಚಟುವಟಿಕೆಗಳು

೧. ಎ. ಜೀವವೈವಿಧ್ಯತೆಯ ಅನ್ವೇಷಣೆ ಪಟ್ಟಿ ಮತ್ತು ನಿಗಾವಣಾ ಕಾರ್ಯಕ್ರಮ

- ಇಡೀ ಭೂಪ್ರದೇಶ, ಜಲಪ್ರದೇಶಗಳನ್ನು ಉದ್ದೇಶಿಸುವ ಬಹು ಪಂಕ್ತಿಯ, ಬಹು ಸಂಘಟನೆಗಳ ಗೂಡಿನಂತೆ ಹೆಣೆಯಲ್ಪಟ್ಟ ಕಾರ್ಯಕ್ರಮಗಳು
- ರಕ್ಷಿತ ಪ್ರದೇಶಗಳ ಮೇಲೆ ಜೀವವೈವಿಧ್ಯತೆಯಲ್ಲಿ ಶ್ರೀಮಂತವಾದ ಇತರ ಕ್ಷೇತ್ರಗಳು ಮತ್ತು ಆವಾಸಗಳ ಮೇಲೆ ಗಮನವನ್ನು ಕೇಂದ್ರೀಕರಿಸುವುದು
- ಭೂಪ್ರದೇಶ ಮತ್ತು ಜೀವ ಪ್ರದೇಶಗಳನ್ನು ಆಗಿಂದಾಗ್ಯೆ ನಿಗಾವಣೆಗೊಳಪಡಿಸುವುದು
- ನಿಯಂತ್ರಿತ ಪ್ರವೇಶಾವಕಾಶವುಳ್ಳ ಗಣಕೀಕೃತ ವ್ಯಾಪಕ ಮಾಹಿತಿ ವ್ಯವಸ್ಥೆಗೆ ಜೋಡಣೆ

ಯೋಜನೆ : ೧. ಎ. ೧. ವೈಜ್ಞಾನಿಕ ಅನ್ವೇಷಣೆಯನ್ನು ಸಂಕಲಿಸುವುದು

- ಅರಣ್ಯ - ಮೀನುಗಾರಿಕೆ - ಕೃಷಿ ಇಲಾಖೆಗಳು; ಸಸ್ಯ ಮತ್ತು ಪ್ರಾಣಿ ಸರ್ವೇಕ್ಷಣೆಗಳು; ವಿಶ್ವವಿದ್ಯಾಲಯಗಳು, ಕೃಷಿ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಸಂಸ್ಥೆಗಳನ್ನು ಒಳಪಡಿಸುವುದು
- ಹಾಲಿ ನಡೆಯುತ್ತಿರುವ ನಿಗಾವಣಾ ಕಾರ್ಯಕ್ರಮದೊಂದಿಗೆ ಸೇರಿಸುವುದು.

ಯೋಜನೆ ೧. ಎ. ೨ ವಂಶವಾಹಿ ರೂಪಾಂತರಿಕ ಜೀವಿಗಳ ತಪಶೀಲಿಕರಣ ಮತ್ತು ನಿಗಾವಣೆ

- ವಂಶವಾಹಿ ರೂಪಾಂತರಿತ ಜೀವಿಗಳ ಗಣನೀಯವಾಗಿ ಹೊರ ಹೊಮ್ಮುತ್ತಿರುವ ಸವಾಲುಗಳು
- ಜೀವಿ - ಸುರಕ್ಷಾ - ಒಪ್ಪಂದ - ವಂಶವಾಹಿ ರೂಪಾಂತರ ಜೀವಿಗಳ ಪರಿಣಾಮಗಳ ಅಂದಾಜಿಸುವ ರಾಷ್ಟ್ರೀಯ ಸಾಮರ್ಥ್ಯಗಳ ಅಭಿವೃದ್ಧಿಗೆ ಕರೆ ನೀಡುತ್ತದೆ
- ಕರ್ನಾಟಕದ ವೈಜ್ಞಾನಿಕ ಮತ್ತು ತಾಂತ್ರಿಕ ಸಾಮರ್ಥ್ಯಗಳನ್ನು ಬಂಡವಾಳವಾಗಿಸಿಕೊಳ್ಳುವ ಅವಕಾಶ.

ಯೋಜನೆ ೧. ಎ. ೩ ಸಮುದಾಯ ಆಧಾರಿತ ತಪಶೀಲು ಪಟ್ಟಿ ಸಂಕಲಿಸುವುದು

- ಶಾಲಾ ಕಾಲೇಜುಗಳನ್ನು, ಸ್ಥಳೀಯ ಜ್ಞಾನ ಸಂಪನ್ನರನ್ನು, ಸಮುದಾಯ ಮುಖಂಡರನ್ನು, ಪಂಚಾಯತ್ ಸಂಸ್ಥೆಗಳನ್ನು ತೊಡಗಿಸುವುದು

- ಔಷಧಿ ಸಸ್ಯ, ಮೀನು ಮತ್ತು ಕಪ್ಪೆ ಚಿಪ್ಪು, ಪವಿತ್ರ ವನಗಳು, ಕೊಳಗಳು ಮತ್ತು ಇತರ ಪವಿತ್ರ ಕ್ಷೇತ್ರಗಳು, ಅರಳಿಯಂತಹ ಪವಿತ್ರ ಮರಗಳು ಮತ್ತು ಕೋತಿಗಳು; ಬೆಳೆ ಜೀವ ವೈವಿಧ್ಯ; ಹಣ್ಣಿನ ಮರಗಳು ಅದರಲ್ಲೂ ವಿಶೇಷವಾಗಿ ಹಲಸು, ಮಾವು, ಭೀರುಂಡಿ, ಹುಣಸೆ ಮುಂತಾದವುಗಳ ಮೇಲೆ ಗಮನಹರಿಸುವುದು.
- ಹಾಲಿ ನಡೆಯುತ್ತಿರುವ ನಿಗಾವಣಾ ಕಾರ್ಯಕ್ರಮಗಳೊಂದಿಗೆ ಜೋಡಣೆ
- ಶಾಲಾ ಮತ್ತು ಕಾಲೇಜು ಅಧ್ಯಾಪಕರೊಂದಿಗೆ ಸಂಪರ್ಕ ಹೊಂದಿದ ವೈಜ್ಞಾನಿಕ ಅನ್ವೇಷಣೆಗಳಲ್ಲಿ (ಯೋಜನೆ ೧. ಎ. ೧. ತೊಡಗಿಸಿಕೊಂಡ ತಾಂತ್ರಿಕ ತಜ್ಞರು ವೈಜ್ಞಾನಿಕ ಹಾಗೂ ಸಮುದಾಯ ಆಧಾರಿತ ಅನ್ವೇಷಣೆಗಳನ್ನು ಜೋಡಿಸಲು ತೊಡಗುತ್ತಾರೆ).

ಯೋಜನೆ ೧. ಎ. ೪ ಜೀವ ವೈವಿಧ್ಯತೆಯ ಉಪಯೋಗದ ಬಗ್ಗೆ ಜನಪದ ಮತ್ತು ಇತರ ಸಾರ್ವಜನಿಕ ವಲಯದಲ್ಲಿನ ಜ್ಞಾನವನ್ನು ದಾಖಲಿಸುವುದು

- ಗಣನೀಯ ಜ್ಞಾನ ಸಂಪನ್ಮೂಲಗಳನ್ನು ಸಂರಕ್ಷಿಸುವ ಅವಶ್ಯಕತೆ
- ಈ ಜ್ಞಾನವನ್ನು ನ್ಯಾಯಯುತ ಭೌದ್ದಿಕ ಆಸ್ತಿ ಹಕ್ಕುಗಳ ಸ್ವಾಮ್ಯ ಪಡೆದುಕೊಳ್ಳಲು ಮತ್ತು ಅನ್ಯಾಯವನ್ನು ಪ್ರತಿಭಟಿಸಲು ಸಂಘಟಿಸುವುದು
- ಅನ್ಯಾಯದ ಅಭ್ಯಾಸಗಳನ್ನು ತಡೆಗಟ್ಟಲು ಮಾಹಿತಿಯನ್ನು ಪಡೆಯುವ ಅವಕಾಶಗಳಿಗೆ ಸೂಕ್ತ ನಿಯಂತ್ರಣ ಕ್ರಮಗಳನ್ನು ಅಳವಡಿಸುವ ಅವಶ್ಯಕತೆ
- ಜನಪದ ಮತ್ತು ಸಾರ್ವಜನಿಕ ವಲಯದ ಜೀವವೈವಿಧ್ಯತೆಯ ಉಪಯೋಗಗಳ ಜ್ಞಾನದ ಲಾಭಗಳನ್ನು ಸಮವಾಗಿ ಹಂಚಿಕೊಳ್ಳುವ ಅಗತ್ಯ.

ಯೋಜನೆ ೧. ಎ. ೫. ಜೀವ ವೈವಿಧ್ಯತೆಯ ಮಾಲಿನ್ಯ ಸೂಚಿಗಳ ಪತ್ತೆ ಹಚ್ಚುವಿಕೆ ಮತ್ತು ಅನ್ವೇಷಣಾ ಪಟ್ಟಿ ತಯಾರಿ

- ಜಲೀಯ ಸೂಕ್ಷ್ಮ ಹಾಗೂ ಬೃಹತ್ ಅಕಶೇರುಗಳು, ಮೀನುಗಳು, ಹಕ್ಕಿಗಳು ಮತ್ತು ಶಿಲಾವಲ್ಕಗಳು

ಯೋಜನೆಗಳು ೧. ಎ. ೬. ಜೀವವೈವಿಧ್ಯತೆಯ ಆವಾಸ ಗುಣಮಟ್ಟ ಸೂಚಿಗಳನ್ನು ಗುರುತಿಸುವುದು ಮತ್ತು ಪಟ್ಟಿ ಮಾಡುವುದು

- ವಿವಿಧ ರೀತಿಯ ಆವಾಸಗಳ ಗುಣಮಟ್ಟದ ಸೂಚಿಗಳು ಉದಾ:- ಕಾಡಿನ ಆವಾಸಗಳ ಗುಣಮಟ್ಟದ ಸೂಚಿಗಳಾಗಿ ಪಕ್ಷಿಗಳು ಮತ್ತು ಚಿಟ್ಟೆಗಳು

ಯೋಜನೆ ೧. ಎ. ೭. ಹೊರ ಮತ್ತು ಆಕ್ರಮಣಕಾರಿ ಪ್ರಭೇದಗಳ ಪತ್ತೆ ಹಚ್ಚುವಿಕೆ, ಅನ್ವೇಷಣೆ ಮತ್ತು ನಿಗಾವಣೆ.

- ಪಾರ್ಥೇನಿಯಂ, ಯುಪಟೋರಿಯಂ, ಲಂಟಾನ, ಅಂತರಗಂಗೆ, ಆಫ್ರಿಕಾದ ಬೆಕ್ಕು ಮೀನು

ಯೋಜನೆ ೧. ಎ. ೮. ಹರ್ಬೇರಿಯಂ, ಮ್ಯೂಸಿಯಂ ಮತ್ತು ಇಲಕ್ಟ್ರಾನಿಕ್ ಮಾಹಿತಿ ಮೂಲಗಳ ಸ್ಥಾಪನೆ

- ಮಾದರಿ ಜೀವಿಗಳ ಮತ್ತು ಸೂಕ್ಷ್ಮವಾಗಿ ಪರಿಶೀಲಿಸಿರುವ ಪ್ರತಿಬಿಂಬಗಳ ನಿರ್ವಹಣೆ

## ೧. ಬಿ. ಪರಿಸರವ್ಯೂಹಗಳ ನಕ್ಷೆ ತಯಾರಿಕೆ

ಯೋಜನೆ ೧. ಬಿ. ೧ ಉಪಗ್ರಹ ಬಿಂಬ ಆಧಾರಿತ ಕಾಡು ಆವಾಸಗಳ ನಕ್ಷೆ ತಯಾರಿ

- ಆವಾಸಗಳ ನಿರಂತರತೆ ಮತ್ತು ವಿಭೇಧೀಕರಣಗಳನ್ನು ಪರಿಗಣಿಸುವುದು ಬಹಳ ಪ್ರಮುಖವಾದದ್ದು
- ಒತ್ತುವರಿ ನಿಯಂತ್ರಣ ಮತ್ತು ನಿಗಾವಣೆ ಬಹಳ ಪ್ರಮುಖವಾದದ್ದು

ಯೋಜನೆ ೧. ಬಿ. ೨ ಉಪಗ್ರಹ ಬಿಂಬ ಆಧಾರಿತ ಜಲೀಯ ಆವಾಸಗಳ ನಕ್ಷೆ ಮಾಡುವುದು

- ಆವಾಸಗಳ ನಿರಂತರತೆ ಮತ್ತು ವಿಭೇಧಿಕರಣಗಳನ್ನು ಪರಿಗಣಿಸುವುದು ಬಹಳ ಪ್ರಮುಖವಾದದ್ದು
- ಒತ್ತುವರಿ ನಿಯಂತ್ರಣ ಮತ್ತು ನಿಗಾವಣೆ ಬಹಳ ಪ್ರಮುಖವಾದದ್ದು.

ಯೋಜನೆ ೧. ಬಿ. ೩. ಜೀವಿ ಪರಿಸರ ಆವಾಸಗಳ ಭೌಗೋಳಿಕ ಮಾಹಿತಿ ವ್ಯವಸ್ಥೆಯ (ಜಿ.ಐ.ಎಸ್.) ಸ್ಥಾಪನೆ

- ಭಾರತೀಯ ದೂರಸಂವೇದಿ ಉಪಗ್ರಹ ಬಿಂಬಗಳನ್ನು ಭೌಗೋಳಿಕ ಮಾಹಿತಿ ವ್ಯವಸ್ಥೆಯೊಂದಿಗೆ ಜೋಡಿಸುವುದು ಒಂದು ಉಪಯುಕ್ತ ಸಾಧನ
- ಭೂ ಪರಿಶೀಲನಾ ಕಾರ್ಯಕ್ರಮವನ್ನು ವೈಜ್ಞಾನಿಕ ಹಾಗೂ ಸಮುದಾಯ ಆಧಾರಿತ ಅನ್ವೇಷಣೆಗೆ ಸಂಪರ್ಕ ಕಲ್ಪಿಸುವುದು.

ಯೋಜನೆ ೧. ಬಿ. ೪. ಅಂತರ ಆವಾಸ ಜೋಡಣೆಯ ಅಧ್ಯಯನಗಳು

ಯೋಜನೆ ೧. ಬಿ. ೧, ೨ ಮತ್ತು ೩ರಲ್ಲಿ ರೂಪಿತಗೊಂಡ ಮಾಹಿತಿ ಮೂಲಗಳ ಅರ್ಥೈಸುವಿಕೆ

**೧. ಸಿ. ಸಾಮಾಜಿಕ - ಆರ್ಥಿಕ ಅಧ್ಯಯನಗಳ ಕಾರ್ಯಕ್ರಮ**

ಯೋಜನೆ ೧. ಸಿ. ೧. ಸಾಂಪ್ರದಾಯಿಕ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ ಅಭ್ಯಾಸಗಳ ದಾಖಲೀಕರಣ

- ಪವಿತ್ರ ವನ, ಕೊಳಗಳು ಮತ್ತು ಇತರ ಪವಿತ್ರ ಸ್ಥಳಗಳು, ಅರಳಿ ಮುಂತಾದ ಪವಿತ್ರ ಮರಗಳು ಮತ್ತು ಕೋತಿ ಮುಂತಾದ ಪವಿತ್ರ ಪ್ರಾಣಿಗಳು.
- ಮೊಟ್ಟೆಯಿಡಲು ಹೊಳೆಗಳಲ್ಲಿ ಮೇಲ್ಮುಖವಾಗಿ ವಲಸೆ ಹೋಗುವ ಮೀನುಗಳಂತಹ ನಿರಂತರ ಬಳಕೆಯ ವಿಧಗಳು
- ಜೀವನೋಪಾಯ ಸಂಪನ್ಮೂಲಕ್ಕಾಗಿ ಸಮುದಾಯಗಳು ಸಂರಕ್ಷಿಸುವ ಹಾಗೂ ನಿರ್ವಹಿಸುತ್ತಿರುವ ಸ್ಥಳಗಳು.
- ಸಂರಕ್ಷಣೆ ಹಾಗೂ ನಿರಂತರ ಬಳಕೆಯನ್ನು ಮುಂತರುವುದರಲ್ಲಿ ಮಹಿಳೆಯರ ಪಾತ್ರ

ಯೋಜನೆ ೧. ಸಿ. ೨. ಸಾಂಪ್ರದಾಯಿಕ ಸಂರಕ್ಷಣೆ - ಸುಸ್ಥಿರ ಬಳಕೆಗಳ ಪ್ರೋತ್ಸಾಹಕ ಶಕ್ತಿಗಳ ಬಗ್ಗೆ - ಮುಂದುವರಿಕೆ ಬಗ್ಗೆ ಅವುಗಳನ್ನು ಪುನರುಜ್ಜೀವನಗೊಳಿಸುವ ಬಗ್ಗೆ ಸಾಮಾಜಿಕ ಪ್ರೇರಣೆಗಳ ಬಗ್ಗೆ ಅಧ್ಯಯನ ನಡೆಸುವುದು.

- ಬದಲಾಗುತ್ತಿರುವ ಧಾರ್ಮಿಕ ನಂಬಿಕೆಗಳು, ಸಮುದಾಯ ರಚನೆ ಮಾರುಕಟ್ಟೆ ಶಕ್ತಿಗಳು.

ಯೋಜನೆ ೧. ಸಿ. ೩. ಜೀವವೈವಿಧ್ಯತೆಯ ಬಗೆಗಿನ ಸಾಂಪ್ರದಾಯಿಕ ಜ್ಞಾನದ ಬಳಕೆ ಮತ್ತು ನಿರ್ವಹಣೆಯ ಬಗ್ಗೆ ದಾಖಲೆ ಮಾಡುವುದು

- ಜೀವವೈವಿಧ್ಯತೆಯ ಸಾಂಪ್ರದಾಯಿಕ ಜ್ಞಾನದ ಬಳಕೆಗೆ ಸಂಬಂಧಿಸಿದಂತೆ ವರ್ಗಾವಣೆಯ ಅಭ್ಯಾಸಗಳು ಹಾಗೂ ಆರ್ಥಿಕ ವ್ಯವಹಾರಗಳು
- ಇಂತಹ ವ್ಯವಸ್ಥೆಗಳಲ್ಲಿ ಮಹಿಳೆಯರ ಪಾತ್ರ

ಯೋಜನೆ ೧. ಸಿ. ೪ ಜೀವವೈವಿಧ್ಯ ನಷ್ಟದ ಸೂಚಿಯಾದ ಜೀವನೋಪಾಯಗಳ ಅಧ್ಯಯನ

- ಜೀವವೈವಿಧ್ಯದ ನಷ್ಟವು ಸದಾ ಪರಿಣಾಮಕಾರಿಯಾಗಿ ಜೀವನೋಪಾಯಕ್ಕೆ ತೊಂದರೆಯನ್ನುಂಟು ಮಾಡುತ್ತದೆ.

  ಉದಾ:- ಮೀನುಗಾರರು, ಬುಟ್ಟಿ ಹೆಣೆಯುವವರು ಹಾಗೂ ಅರಣ್ಯ ಉತ್ಪನ್ನ ಸಂಗ್ರಹಕರು

- ಜೀವವೈವಿಧ್ಯದ ಮೇಲುಸ್ತುವಾರಿಯು ಬಡತನ ನಿವಾರಣೆಯಂತಹ ಪ್ರಮುಖ ಕೊಡುಗೆಯನ್ನು ನೀಡಬಲ್ಲದು

ಯೋಜನೆ ೧. ಸಿ. ೫ ಜೀವವೈವಿಧ್ಯ ನಷ್ಟದ ಸೂಚಿಯಾದ ಆರೋಗ್ಯದ ಅಧ್ಯಯನ

- ಜೀವವೈವಿಧ್ಯದ ನಷ್ಟವು ಸದಾ ಪರಿಣಾಮಕಾರಿಯಾಗಿ ಆರೋಗ್ಯಕ್ಕೆ ತೊಂದರೆಯನ್ನುಂಟು ಮಾಡುತ್ತದೆ.

  ಉದಾ:- ಗಿಡಮೂಲಿಕೆಗಳ ನಷ್ಟದಿಂದ, ಮೀನಿನ ರೂಪದಲ್ಲಿನ ಪೌಷ್ಠಿಕತೆಯ ನಷ್ಟದಿಂದ ಅಥವಾ ಕೊಳಚೆ ನೀರಿನ ಪರಿಣಾಮದಿಂದ ರೋಗ ವಾಹಕಗಳ ವೃದ್ಧಿಯಿಂದ

ಯೋಜನೆ ೧. ಸಿ. ೬ ಜೀವವೈವಿಧ್ಯದ ನಷ್ಟದ ಸೂಚಿಯಾದ ಗಡುವಿನ ವ್ಯವಸ್ಥೆಗಳ ಅಧ್ಯಯನ

- ಗಡು ಹಾಗೂ ಪಡೆಯುವ ಹಕ್ಕುಗಳು ಸಂರಕ್ಷಿಸುವುದು ಅಥವಾ ಹಾನಿ ಮಾಡುವಂತಹ ಚಾಲನೆಯ ಮೇಲೆ ಸಂಬದ್ಧ ಪರಿಣಾಮಗಳನ್ನು ಬೀರುತ್ತವೆ.
- ಕಾರ್ಯತಂತ್ರ ೪ ಹಾಗೂ ೪. ೨ರಂತಹ ಯೋಜನೆಗಳನ್ನು ರೂಪಿಸುವಲ್ಲಿ ಇಂತಹ ವಿಷಯಗಳ ಬಗ್ಗೆ ತಿಳುವಳಿಕೆಯು ಅತ್ಯಗತ್ಯವಾಗಿದೆ.

ಯೋಜನೆ ೧. ಸಿ. ೭. ನೂತನವಾಗಿ ಹೊರ ಹೊಮ್ಮುತ್ತಿರುವ ಭೌದ್ಧಿಕ ಆಸ್ತಿ ಹಕ್ಕುಗಳು, ವಂಶವಾಹಿ ರೂಪಾಂತರಿತ ಜೀವಗಳಿಂದ ಹೊರ ಹೊಮ್ಮುತ್ತಿರುವ ನವ ಸವಾಲುಗಳ ಬಗ್ಗೆ ಜನರ ಪ್ರತಿಕ್ರಿಯೆಗಳನ್ನು ದಾಖಲಿಸುವುದು.

- ನವ ಸವಾಲುಗಳನ್ನೆದುರಿಸಲು ಸಾಮರ್ಥ್ಯಗಳ ವೃದ್ಧಿಗಾಗಿ ತಿಳುವಳಿಕೆ ಅಗತ್ಯ.

## ಯೋಜನೆ ೧. ಡಿ. ಜೀವವೈವಿಧ್ಯದ ಬದಲಾವಣೆಯ ಗತಿ ಮತ್ತು ಚಾಲನಾ ಶಕ್ತಿಗಳು

ಯೋಜನೆ ೧. ಡಿ. ೧. ಅರಣ್ಯಗಳು, ಹುಲ್ಲುಗಾವಲುಗಳು, ಕೃಷಿ ಯೋಗ್ಯ ಗದ್ದೆಗಳು, ತೋಟಗಳು ಮತ್ತು ತೋಪುಗಳು, ತೊರೆಗಳು ಮತ್ತು ನದಿಗಳು, ಕೆರೆಗಳು ಮತ್ತು ಸರೋವರಗಳು, ಗ್ರಾಮೀಣ ಮತ್ತು ನಗರ ವಾಸಸ್ಥಾನಗಳು ಮುಂತಾದ ಪ್ರಮುಖ ಪರಿಸರ

ವ್ಯೂಹಗಳಲ್ಲಿ ಕಾಲಾಂತರದಲ್ಲುಂಟಾಗುವ ಪ್ರಮುಖ ಬದಲಾವಣೆಗಳು ಮತ್ತು ಈ ಬದಲಾವಣೆಗಳಿಗೆ ಕಾರಣವಾದ ಚಾಲಕ ಶಕ್ತಿಗಳು.

- ವೈಜ್ಞಾನಿಕ ಮತ್ತು ಸಮುದಾಯ ಆಧಾರಿತ ಅನ್ವೇಷಣಾ ಪಟ್ಟಿಗಳನ್ನು ಜೊತೆಗೂಡಿಸಿ ಮತ್ತು ಪರಿಸರವ್ಯೂಹ ನಕ್ಷೆ ತಯಾರಿಯ ಮೂಲಕ ನೆರವೇರಿಸತಕ್ಕದ್ದು.

ಯೋಜನೆ ೧. ಡಿ. ೨ ಔಷಧೀಯ ಸಸ್ಯಗಳು, ತೋಪುಗಳು ಮತ್ತು ಕಿರು ಅರಣ್ಯ ಉತ್ಪನ್ನಗಳು, ಮೀನುಗಳು ಮತ್ತು ಚಿಪ್ಪು ಮೀನುಗಳು, ನೀರ್ಕೋಳಿಗಳು, ದೊಡ್ಡಗಾತ್ರದ ಸಸ್ತನಿಗಳು ಮುಂತಾದ ಜೀವವೈವಿಧ್ಯ ಸಂಪನ್ಮೂಲಗಳಲ್ಲಿ ಕಾಲಾಂತರದಲ್ಲುಂಟಾಗುವ ಪ್ರಮುಖ ಬದಲಾವಣೆಗಳು ಮತ್ತು ಈ ಬದಲಾವಣೆಗೆ ಕಾರಣವಾದ ಚಾಲಕ ಶಕ್ತಿಗಳು.

- ವೈಜ್ಞಾನಿಕ ಮತ್ತು ಸಮುದಾಯ ಆಧಾರಿತ ಅನ್ವೇಷಣಾ ಪಟ್ಟಿಗಳನ್ನು ಜೊತೆಗೂಡಿಸಿ ಮತ್ತು ಪರಿಸರವ್ಯೂಹ ನಕ್ಷೆ ತಯಾರಿಯ ಮೂಲಕ ನೆರವೇರಿಸತಕ್ಕದ್ದು.

## ಕಾರ್ಯತಂತ್ರ ೨

ಹಾಲಿ ನಡೆಯುತ್ತಿರುವ ಮತ್ತು ಯೋಜಿತ ಸ್ವ ಸ್ಥಾನೀಯ ಹಾಗೂ ಪರಸ್ಥಾನೀಯ ಜೀವ ವೈವಿಧ್ಯ ಸಂರಕ್ಷಣಾ ಪ್ರಯತ್ನಗಳನ್ನು ಉತ್ತಮಪಡಿಸುವುದು ಮತ್ತು ಒಗ್ಗೂಡಿಸುವುದು.

- ಸಧ್ಯ ರಕ್ಷಿತ ಪ್ರದೇಶಗಳ ವ್ಯಾಪ್ತಿಗೆ ಸೀಮಿತಗೊಳಿಸಲಾಗಿದೆ.
- ಖಾಸಗಿ ಮತ್ತು ಕಂದಾಯ ಪ್ರದೇಶಗಳಿಗೆ ಚಿಕ್ಕ ಕ್ಷೇತ್ರಗಳಿಗೂ ಗಮನ ಕೇಂದ್ರೀಕರಿಸುವ ಅವಶ್ಯಕತೆಯಿವೆ.
- ಎಲ್ಲಾ ವಿಧಗಳ ಜಲ ಆವಾಸಗಳಿಗೆ, ಸಿಹಿನೀರಿನ, ಅಳಿವೆಯ, ಕರಾವಳಿ ಮತ್ತು ತೆರೆದ ಸಮುದ್ರದ ಆವಾಸಗಳತ್ತ ಗಮನ ಕೇಂದ್ರೀಕರಿಸುವ ಅವಶ್ಯಕತೆಯಿದೆ.
- ಕೃಷಿ ಜೀವ ವೈವಿಧ್ಯದತ್ತ ಗಮನ ಕೇಂದ್ರೀಕರಿಸುವ ಅವಶ್ಯಕತೆ
- ಸೂಕ್ಷ್ಮ ಜೀವಿಗಳತ್ತ ಗಮನ ಕೇಂದ್ರೀಕರಿಸುವ ಅವಶ್ಯಕತೆ

### ಕ್ರಿಯಾಯೋಜನೆ ೨

ಸೂಚಿತ ಕಾರ್ಯಕ್ರಮಗಳು, ಯೋಜನೆಗಳು ಮತ್ತು ಚಟುವಟಿಕೆಗಳು

೨. ಎ. ಸ್ವ ಸ್ಥಾನೀಯ ಸಂರಕ್ಷಣಾ ಕಾರ್ಯಕ್ರಮ

ಯೋಜನೆ ೨. ಎ. ೧. ಅತೀ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಕೆಲವು ಹೆಚ್ಚುವರಿ ಸಂರಕ್ಷಣಾ ಪ್ರದೇಶಗಳ ಸ್ಥಾಪನೆ.

- ದಖ್ಖಣದ ಪ್ರಸ್ಥಭೂಮಿ ಪರಿಸರ ವ್ಯೂಹಗಳಿಗೆ ರಕ್ಷಣೆಯನ್ನು ವೃದ್ಧಿಸಬೇಕಾದ ಅವಶ್ಯಕತೆ

**ಯೋಜನೆ ೨ ಎ. ೨. ಪರಿಸರಾತ್ಮಕವಾಗಿ ಸೂಕ್ಷ್ಮ ಕ್ಷೇತ್ರವಾದ ಸಹ್ಯಾದ್ರಿಯ ಸಂರಕ್ಷಣೆ**

- ಪರಿಸರಾತ್ಮಕ ಸೂಕ್ಷ್ಮ ಪ್ರದೇಶಗಳನ್ನು ಪರಿಸರ ರಕ್ಷಣೆಯ ನವ ಮಾದರಿಗಳಾಗಿಸಿಕೊಳ್ಳುವುದು.
- ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರದ ತ್ರಿಕೂಟ ಸಂಗಮ ಕ್ಷೇತ್ರದ ಜೀವವೈವಿಧ್ಯ ಶ್ರೀಮಂತಿಕೆ.

**ಯೋಜನೆ ೨. ಎ. ೩ ವಿಶೇಷ ಆವಾಸಗಳನ್ನು ರಕ್ಷಿಸುವ ಸಂರಕ್ಷಣಾ ಕ್ಷೇತ್ರಗಳ ಸ್ಥಾಪನೆ**

ಉದಾ :- ಮೈರಿಸ್ಟಿಕಾ ಜೌಗು ಪ್ರದೇಶ ಮತ್ತು ಕಾಂಡ್ಲಾ ಗಜನಿ ಭೂ ಭಾಗಗಳ ಸೇರ್ಪಡೆ.

**ಯೋಜನೆ. ೨. ಎ.೪. ಕರಾವಳಿ ರಕ್ಷಿತ ತಾಣಗಳ ಸ್ಥಾಪನೆ**

- ಭಟ್ಕಳದ ಸಮೀಪದ ನೇತ್ರಾಣಿ ದ್ವೀಪ ಮತ್ತು ಕಾರವಾದ ಸಮೀಪದ ಅಂಜದೀವ್ ದ್ವೀಪಗಳು ಅಭ್ಯರ್ಥಿ ಕ್ಷೇತ್ರದಲ್ಲಿ ಸೇರಿವೆ.

**ಯೋಜನೆ ೨. ಎ. ೫. ರಕ್ಷಿತ (ಕಾಂಡ್ಲಾ) ಅಳಿವೆ ಪ್ರದೇಶ ಸ್ಥಾಪನೆ**

- ಅಭ್ಯರ್ಥಿ ಕ್ಷೇತ್ರಗಳಲ್ಲಿ ಅಧಿಕ ಬೆಲೆಯ ಸ್ತ್ರಿಮೀನು ಸಿಲ್ಲಾಗೋ ಸಿಹಾಮ, ಉಪಸ್ಥಿತಿಯಿರುವ ಶರಾವತಿ ಅಳಿವೆ ಪ್ರದೇಶ ಸೇರಿದೆ.

**ಯೋಜನೆ ೨. ಎ. ೬. ಆಮೆಗಳ ಸಾಕಾಣಿಕಾ ಸಮುದ್ರ ಕರಾವಳಿ ಕ್ಷೇತ್ರಗಳ ಸ್ಥಾಪನೆ**

- ಸಮುದ್ರ ಗೋಡೆಗಳು ಮತ್ತಿತರ ವಿವಿಧ ಬೆಳವಣಿಗೆಗಳು, ಆಮೆಗಳು ಕಡಲ ತೀರ ಪ್ರವೇಶಿಸುವುದರ ಮೇಲೆ ಪ್ರತಿಕೂಲವಾದ ಪರಿಣಾಮವನ್ನು ಬೀರಬಹುದು.
- ಆಮೆಗಳ ಮೊಟ್ಟೆಗಳ ಸಂಗ್ರಹಣೆಯನ್ನು ನಿಯಂತ್ರಿಸುವ ಅವಶ್ಯಕತೆಯಿದೆ.

**ಯೋಜನೆ ೨. ಎ. ೭. ಸಮುದ್ರ ಪಕ್ಷಿಗಳ ಸಂತಾನಾಭಿವೃದ್ಧಿ ವಸಾಹತು ಸಂರಕ್ಷಣಾ ಕ್ಷೇತ್ರಗಳ ಸ್ಥಾಪನೆ.**

- ಸಮುದ್ರ ದಡದಿಂದ ಹೊರತಾಗಿರುವ ದ್ವೀಪಗಳು.

**ಯೋಜನೆ ೨. ಎ. ೮. ನೀರಾವರಿ ಕೆರೆ ಜೀವಿ ವೈವಿಧ್ಯ ಸಂರಕ್ಷಣಾ ಕ್ಷೇತ್ರಗಳ ಸ್ಥಾಪನೆ.**

- ಕರ್ನಾಟಕದ ಸುಮಾರು ೪೦೦೦ ಕೆರೆಗಳು ಜಲಪ್ರದೇಶದ ಜೀವಿ ವೈವಿಧ್ಯದ ವಿಶಿಷ್ಟ ಆವಾಸಗಳು.

- ಜಲಪಾತಗಳಲ್ಲಿ ಜಾಲ ಸಂಘಟನೆ.
- ಜೀವಿ ವೈವಿಧ್ಯ ಸಂರಕ್ಷಣೆಗೆ ಸುಮಾರು ೫%ರಷ್ಟು ಅನುಪಾತ ತೆಗೆದಿರಿಸುವುದು.
- ಜನತೆ ಸಹಕರಿಸುವಂತೆ ಮಾಡಿ ಮನವೊಲಿಸಲು ಸಂಸ್ಥೆಗಳ ಮತ್ತು ಸಾಧನಗಳ ಅವಶ್ಯಕತೆಯಿದೆ.

ಯೋಜನೆ ೨. ಎ. ೯ ಮರ ಜೀವಿ ವೈವಿಧ್ಯ ತಾಣಗಳಾಗಿ ಗುಂಡು ತೋಪುಗಳ ಸ್ಥಾಪನೆ

- ಮರ ವಂಶವಾಹಿ ಸಂಪನ್ಮೂಲಗಳ ಸಂರಕ್ಷಣೆಯ ಸಾಂಪ್ರದಾಯಿಕ ವ್ಯವಸ್ಥೆ.
- ಆಗಾಗ್ಯೆ ಕೆರೆಯ ಜಲಾನಯನ ಪ್ರದೇಶಗಳ ರಕ್ಷಣೆ ಜೋಡಣೆ.

ಯೋಜನೆ ೨. ಎ. ೧೦. ಹಣ್ಣಿನ ಮರಗಳ ಸಾಂಬಾರ ಮರಗಳ ಜೀವಿ ವೈವಿಧ್ಯ ಸಂರಕ್ಷಣಾ ತಾಣಗಳ ಸ್ಥಾಪನೆ.

- ಕರ್ನಾಟಕ ಹಣ್ಣಿನ ಮರಗಳ ವಂಶವಾಹಿ ಸಂಪನ್ಮೂಲಗಳಲ್ಲಿ ಶ್ರೀಮಂತವಾಗಿದೆ, ಉದಾ:- ಹಲಸು, ಮಾವು, ಭೀರುಂಡಿ, ರಾಮಪತ್ರೆ ಮುಂತಾದ ಮರಗಳು.

ಯೋಜನೆ ೨. ಎ. ೧೧. ಔಷಧಿ ಸಸ್ಯಗಳ ಸಂರಕ್ಷಣಾ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವುದು.

- ವಿವಿಧ ಪ್ರಾತಿನಿಧಿಕ ಹಸಿರುಡುಗೆ ವಲಯಗಳಲ್ಲಿ ಔಷಧಿ ಸಸ್ಯಗಳ ಸ್ವ ಸ್ಥಾನೀಯ ಸಂರಕ್ಷಣಾ ತಾಣಗಳ ಸ್ಥಾಪನೆ.

ಯೋಜನೆ ೨. ಎ. ೧೨ ಕೊಕ್ಕರೆಗಳ ಸಂರಕ್ಷಣಾ ಪ್ರದೇಶಗಳ ಸ್ಥಾಪನೆ.

- ಜಲ ಪಕ್ಷಿಗಳ ಸಂತಾನಾಭಿವೃದ್ಧಿ ಸಮುಚ್ಚಯಗಳನ್ನು ಖಾಸಗಿ ಜಮೀನಿನಲ್ಲಿ ಕೂಕ್ಕರೆ ಬೆಳ್ಳೂರಿನಲ್ಲಿರುವಂತೆ ಅಭಿವೃದ್ಧಿಪಡಿಸುವ ಅವಶ್ಯಕತೆ.

ಯೋಜನೆ ೨. ಎ. ೧೩. ಬಾವಲಿ ಸಮುಚ್ಚಯ ಸಂರಕ್ಷಣಾ ತಾಣಗಳ ಸ್ಥಾಪನೆ.

- ವಿಶಿಷ್ಟ ಬಾವಲಿ ಸಮುಚ್ಚಯಗಳ ಸ್ಥಾಪನೆ ಅಗತ್ಯವಿದೆ. ಉದಾ.:- ಬೆಳಗಾಂ ಜಿಲ್ಲೆಯ ಖಾನಾಪುರ್ ತಾಲ್ಲೂಕಿನ ಭೀಮ್‌ಗಡ್‌ನಲ್ಲಿನ ರಾಟನ್ಸ್ ಫ್ರೀ ಟ್ಯೆಲ್ಡ್ ಬಾವಲಿ ಮತ್ತು ಥೋಬಾಲ್ಡ್ ಟೂಂಬ್ ಬಾವಲಿ.

ಯೋಜನೆ ೨. ಎ. ೧೪. ಹೊಲಗಳಲ್ಲೇ ಬೆಳೆವಂಶವಾಹಿ ವೈವಿಧ್ಯತೆ ಸಂರಕ್ಷಣಾ ತಾಣಗಳ ಸ್ಥಾಪನೆ.

- ಉತ್ತಮ ಮಟ್ಟದ ಬೆಳೆ ವಂಶವಾಹಿ ವೈವಿಧ್ಯತೆಯುಳ್ಳ ಸಾವಯವ ಕೃಷಿ ಕ್ಷೇತ್ರಗಳ ಪ್ರಾಯೋಗಿಕ ಮಾದರಿ ತಾಣಗಳನ್ನು ನೂತನ ಸಂಸ್ಥೆ ಸಾಧನಗಳೊಂದಿಗೆ ಸ್ಥಾಪಿಸಿ ಹಸಿರು ಮಾರುಕಟ್ಟೆ ಒದಗಿಸಿ ಜನಗಳನ್ನು ಸಹಕರಿಸುವಂತೆ ಮನ ಒಲಿಸುವುದು; ಪ್ರಸ್ತುತ ರೈತರ ಅಥವಾ ಸ್ವಯಂ ಸೇವಾ ಸಂಘಟನೆಯ ಉಪಕ್ರಮವನ್ನು ಈ ದಿಶೆಯತ್ತ ಉತ್ತೇಜಿಸುವುದು/ಸುಲಭಗೊಳಿಸುವುದು.
- ಪಾರಂಪರಿಕ ಜಾನುವಾರು ತಳಿಗಳನ್ನ ಸ್ಥಳೀಯವಾಗಿ ಸಂರಕ್ಷಿಸಲು ಪ್ರಾಯೋಗಿಕ ಪ್ರದೇಶಗಳ ಸ್ಥಾಪನೆ ಹಾಗೂ ಜಾನುವಾರು ಮೇಯಿಸುವವರು/ಸಾಕುವವರು ಮತ್ತು ಇಂತಹ ಕೆಲಸದಲ್ಲಿ ತೊಡಗಿದ ಸರ್ಕಾರೇತರ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಅಗತ್ಯವಿದೆ.

**ಯೋಜನೆ ೨. ಎ. ೧೫. ಪವಿತ್ರ ವನಗಳ ಸಂರಕ್ಷಣೆ**

- ಕೊಡಗಿನ ದೇವರ ಕಾಡುಗಳು ಮತ್ತು ದಕ್ಷಿಣ ಕನ್ನಡದ ನಾಗಬನಗಳು ಚಿತ್ತಾಕರ್ಷಕ ಉದಾಹರಣೆಗಳು

**ಯೋಜನೆ ೨. ಎ. ೧೬ ಪವಿತ್ರ ಕೊಳಗಳ ಸಂರಕ್ಷಣೆ**

**ಯೋಜನೆ ೨. ಎ. ೧೭. ಪವಿತ್ರ ಹೊಳೆ ಮತ್ತು ನದಿ ಪ್ರದೇಶಗಳ ಸಂರಕ್ಷಣೆ**

- ಬೆಳ್ತಂಗಡಿ ತಾಲ್ಲೂಕಿನ ಶಿಶಿಲಾದಲ್ಲಿನ ಕಪಿಲಾ ನದಿಯ ಭಾಗ, ದಕ್ಷಿಣ ಕನ್ನಡ ಸುಳ್ಯ ತಾಲ್ಲೂಕಿನ ತೋಡಿಕಾನ ಚಿತ್ತಾಕರ್ಷಕ ಉದಾಹರಣೆಗಳು
- ಇತರ ಅಪರೂಪದ ಸ್ಥಳೀಯ ಸೂಕ್ತ ಪ್ರಭೇಧಗಳನ್ನು ಇಂತಹ ಸುರಕ್ಷಿತ ತಾಣಗಳಿಗೆ ಸೇರ್ಪಡೆ ಮಾಡಬಹುದು.

**ಯೋಜನೆ ೨. ಎ. ೧೮ ಪವಿತ್ರ ಮರಗಳ ಸಂರಕ್ಷಣೆ**

- ಅರಳಿಮರದ ಪ್ರಭೇದಗಳ ನೆಲೆಸ್ಥಂಭ ಸಂಪನ್ಮೂಲಗಳು
- ಅತ್ಯಂತ ವ್ಯಾಪಕ ಪ್ರಮಾಣದಲ್ಲಿ ಸಾಂಪ್ರದಾಯಿಕವಾಗಿ ಸಂರಕ್ಷಿಸಲಾಗಿದೆ.
- ಸಂರಕ್ಷಣಾ ಸಂಪ್ರದಾಯಗಳನ್ನು ಜನ ಮುಂದುವರಿಸುವಂತೆ ಮನವೊಲಿಸಲು ಸಂಸ್ಥೆಗಳ ಮತ್ತು ಸಾಧನಗಳ ಅಗತ್ಯವಿದೆ.

**ಯೋಜನೆ ೨. ಎ. ೧೯ ವಿಶೇಷ ರಕ್ಷಿತ ಕ್ಷೇತ್ರಗಳ ಸಂರಕ್ಷಣೆ**

- ಭಾರತೀಯ ನೌಕಾ ನೆಲೆ "ಸೀ ಬರ್ಡ್" ನೌಕಾನೆಲೆಯ ಸಮೀಪದ ಅಂಜದೀವ್ ದ್ವೀಪ ಕೈಗಾ ಅಣುಸ್ಥಾವರದ ಸಮೀಪದ ನಿಷೇಧಿತ ಪ್ರದೇಶ ಮತ್ತು ಬೆಂಗಳೂರಿನ ರಕ್ಷಣಾ ಸ್ಥಾವರಗಳ ಸುತ್ತಮುತ್ತಲ ಪ್ರದೇಶಗಳು ಉದಾಹರಣೆಗಳಲ್ಲಿ ಸೇರಿವೆ.

ಯೋಜನೆ ೨. ಎ. ೨೦. ನಗರ ಪ್ರದೇಶಗಳ ಜೀವವೈವಿಧ್ಯತೆಯ ಸಂರಕ್ಷಣೆ

- ಜೀವವೈವಿಧ್ಯದಿಂದ ಸಮೃದ್ಧವಾಗಿರುವ ನಗರ ಪ್ರದೇಶಗಳ ಆವಾಸವಾದ ಕೆರೆಗಳ ಹಾಗೂ ದೇವಸ್ಥಾನದ ಮರಗಳ ರಕ್ಷಣೆಯ ಅವಶ್ಯಕತೆ

ಯೋಜನೆ ೨. ಎ. ೨೧ ಸಮುದಾಯ ನಿಯಂತ್ರಿತ, ನಿರಂತರ ಬಳಕೆಯ ಗ್ರಾಮ ಅರಣ್ಯಗಳು ಹಾಗೂ ಹುಲ್ಲುಗಾವಲುಗಳ ಜೀವವೈವಿಧ್ಯ ಮೈತ್ರೀ ನಿರ್ವಹಣೆ

- ಉದಾ:- ಉತ್ತರ ಕನ್ನಡ ಜಿಲ್ಲೆಯ ಕುಮುಟಾ ತಾಲ್ಲೂಕಿನ ಹಲ್ಕಾರ್ ಗ್ರಾಮ ಅರಣ್ಯ

ಯೋಜನೆ ೨. ಎ. ೨೨ ಖಾಸಗಿ ನಿಯಂತ್ರಿತ ಕಾಡುಪ್ರದೇಶಗಳಾದ ಸೊಪ್ಪಿನ ಬೆಟ್ಟ, ಕುಮ್ಕಿ ಹಾಗೂ ಹಾಡಿ ಪ್ರದೇಶಗಳ ಜೀವವೈವಿಧ್ಯ ಮೈತ್ರೀ ನಿರ್ವಹಣೆ

- ಇಂತಹ ವಿಶಿಷ್ಟ ಪ್ರದೇಶಗಳಂತಹ ಇನ್ನೂ ಹೆಚ್ಚಿನ ಕ್ಷೇತ್ರವನ್ನು ಜೀವವೈವಿಧ್ಯ ಮೈತ್ರೀ ನಿರ್ವಹಣೆಗೆ ಸೇರಿಸುವುದು

ಯೋಜನೆ ೨. ಎ. ೨೩ ಅನ್ಯ ಆಕ್ರಮಣಕಾರಿ ಪ್ರಭೇದಗಳ ನಿಯಂತ್ರಣ

- ವಿವಿಧ ಆವಾಸಗಳಲ್ಲಿನ ಅನ್ಯ ಆಕ್ರಮಣಕಾರಿ ಪ್ರಭೇದಗಳನ್ನು ನಿಯಂತ್ರಿಸುವ ಅಗತ್ಯವಿದೆ.

೨. ಬಿ. ಅನ್ಯ ಸ್ಥಾನೀಯ ಸಂರಕ್ಷಣಾ ಕಾರ್ಯಕ್ರಮ

ಯೋಜನೆ ೨. ಬಿ. ೧. ಅವನತಿ ಹೊಂದಿರುವ ಅರಣ್ಯ ಪ್ರದೇಶಗಳಲ್ಲಿ ಮತ್ತು ರಸ್ತೆ ಬದಿಯ ನೆಡು ತೋಪುಗಳಲ್ಲಿ ಔಷಧೀಯ ಸಸ್ಯಗಳ ವಂಶವಾಹಿ ಸಂಪನ್ಮೂಲ ಕೇಂದ್ರಗಳ ಸ್ಥಾಪನೆ.

- ಪಾಳು ಭೂಮಿಗಳಲ್ಲಿ ಔಷಧೀಯ ಸಸ್ಯಗಳನ್ನು ಬೆಳೆಯುವಂತೆ ಪ್ರೋತ್ಸಾಹ ನೀಡುವ ಗ್ರಾಮ ಅರಣ್ಯ ಸಮಿತಿಗಳಂತಹ ಸಾಂಸ್ಥಿಕ ವ್ಯವಸ್ಥೆಗಳನ್ನು ವಿಸ್ತರಿಸುವುದು.
- ಔಷಧಿ ಮರಗಳನ್ನು ಉದಾ: ಫಿಲ್ಲಾಂತಸ್ ಎಂಬ್ಲಿಕಾ, ಟರ್ಮಿನೇಲಿಯ ಬೆಲ್ಲರಿಕಾ ಹಾಗೂ ಟರ್ಮಿನೇಲಿಯಾ ಚೆಬುಲಾಗಳಂತಹ ರಸ್ತೆ ಬದಿಯ ಮರಗಳನ್ನಾಗಿ ಬೆಳೆಯುವ ಪ್ರಬಲ ಸಾಧ್ಯತೆಗಳು

ಯೋಜನೆ ೨. ಬಿ. ೨. ಕೆರೆ ಜಲಾನಯನ ಪ್ರದೇಶಗಳಲ್ಲಿ ಔಷಧೀಯ ಸಸ್ಯಗಳ ವಂಶವಾಹಿ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸುವುದು.

- ಜಲಾನಯನ ಪ್ರದೇಶ ಸಂರಕ್ಷಣೆಯ ಭಾಗವಾಗಿ ಅಲ್ಲಿ ಔಷಧಿ ಸಸ್ಯಗಳ ಕೃಷಿಯನ್ನು ಜೋಡಿಸಬಹುದಾದ ಪ್ರಬಲ ಸಾಧ್ಯತೆ.

**ಯೋಜನೆ ೨. ಬಿ. ೩. ಔಷಧಿ ಸಸ್ಯಗಳ ವಂಶವಾಹಿ ಸಂಪನ್ಮೂಲಗಳ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ**

- ಪಾರಂಪರಿಕ ಔಷಧೀಯ ಸಸ್ಯಗಳ ತೋಟವನ್ನು ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ
- ಯೋಜನೆ ೨. ಎ. ೧೧ರಲ್ಲಿ ನಮೂದಿಸಿರುವ ಔಷಧಿ ಸಸ್ಯಗಳ ಸಂರಕ್ಷಣಾ ಕೇಂದ್ರಗಳ ಸಹಯೋಗದೊಂದಿಗೆ.

**ಯೋಜನೆ ೨. ಬಿ. ೪. ಹೊಂಗೆ ಹಾಗೂ ಬೇವು ವಂಶವಾಹಿ ಸಂಪನ್ಮೂಲ ಕೇಂದ್ರಗಳ ಸ್ಥಾಪನೆ**

- ಹವಾಮಾನ ಬದಲಾವಣೆ - ಮರುಭೂಮೀಕರಣ ಯೋಜನೆಗಳನ್ವಯ ವಿವಿದೋದ್ದೇಶ ಮರಗಳ ಪ್ರಭೇದಗಳ ವಂಶವಾಹಿ ಸಂಪನ್ಮೂಲಗಳನ್ನು ಸಂರಕ್ಷಿಸುವ ಸಾಧ್ಯತೆ.

**ಯೋಜನೆ ೨. ಬಿ. ೫. ಅರಳಿ ಮರ ಸಂಪನ್ಮೂಲಗಳನ್ನು ರಸ್ತೆ ಬದಿಯ ಮರಗಳ ಮೂಲಕ ಸಂರಕ್ಷಿಸುವುದು.**

- ಫೈಕಾಸ್ ಜಾತಿಯ ಆಲದ ಮರವನ್ನು ಮುಖ್ಯ ಸ್ಥಂಭ ಸಂಪನ್ಮೂಲವಾಗಿ ಸಂರಕ್ಷಿಸುವುದು.
- ರಸ್ತೆ ಬದಿಯ ಮರವಾಗಿ ವ್ಯಾಪಕವಾಗಿ ಸಾಂಪ್ರದಾಯಿಕ ರಕ್ಷಿಸಲ್ಪಟ್ಟಿರುವುದು

**ಯೋಜನೆ ೨. ಬಿ. ೬. ಸಸ್ಯೋದ್ಯಾನಗಳನ್ನು, ಪ್ರಾಣಿಸಂಗ್ರಹಾಲಯಗಳನ್ನು ಮತ್ತು ಸಫಾರಿ ಉದ್ಯಾನಗಳನ್ನು ಉತ್ತಮಪಡಿಸುವುದು.**

- ಅಪರೂಪದ ಮತ್ತು ಅಪಾಯದಂಚಿನಲ್ಲಿರುವ ಪ್ರಭೇದಗಳ ಸಂತಾನಾಭಿವೃದ್ಧಿಯತ್ತ ಗಮನ ಹರಿಸುವುದು
- ಪ್ರಾಣಿಗಳನ್ನು ಬಂಧನದ ಗೂಡುಗಳಲ್ಲಿಡುವ ಪದ್ಧತಿಗಳನ್ನು ಕ್ರಮೇಣ ಕೈಬಿಡುತ್ತಾ ಬರುವುದು

**ಯೋಜನೆ ೨. ಬಿ. ೭. ಮೀನು ಮತ್ತು ಚಿಪ್ಪು ಮೀನುಗಳ ವಂಶವಾಹೀ ಬ್ಯಾಂಕುಗಳ ಸ್ಥಾಪನೆ**

- ಪ್ರಾತಿನಿಧಿಕ ಜಲೀಯ ಆವಾಸಗಳಲ್ಲಿ

**ಯೋಜನೆ ೨. ಬಿ. ೮. ಬೆಳೆಯುವ ಬೆಳೆಗಳ ವಂಶವಾಹಿ ಸಂಪನ್ಮೂಲ ಕೇಂದ್ರಗಳ ಸ್ಥಾಪನೆ**

- ಸಮುದಾಯ ವಂಶವಾಹಿ ಬ್ಯಾಂಕುಗಳು ಹಾಗೂ ಕೃಷಿ ಸಂಶೋಧನಾ ಕೇಂದ್ರಗಳ ಸಂಯೋಜನೆಯೊಂದಿಗೆ

- ಪ್ರಾತಿನಿಧಿಕ ಕೃಷಿ-ಪಾರಿಸರಿಕ ವಲಯಗಳಲ್ಲಿ
- ಸದಾ ಬೀಜಗಳನ್ನು ಆಯ್ಕೆ ಮಾಡುವ ಮತ್ತು ಕಾಪಾಡುವ ಮಹಿಳೆಯರನ್ನು ಸಂಪೂರ್ಣವಾಗಿ ತೊಡಗಿಸುವುದು.
- ಪಾರಂಪರಿಕ ಬೆಳೆಗಳನ್ನು ಕಾಪಾಡುತ್ತಿರುವ ಗುಡ್ಡಗಾಡು ಜನಾಂಗ ಹಾಗೂ ಸಣ್ಣ ಪ್ರಮಾಣದ ರೈತರನ್ನು ಸಂಪೂರ್ಣವಾಗಿ ತೊಡಗಿಸುವುದು.

**ಯೋಜನೆ ಬಿ. ೨. ೯. ಜೀವವೈವಿಧ್ಯ ಆಧಾರಿತ ನಗರ ಅರಣ್ಯೀಕರಣ ಯೋಜನೆ** ಕಾರ್ಯಕ್ರಮಗಳು

- ಹಲವಾರು ನಗರ ಅರಣ್ಯೀಕರಣ ಕಾರ್ಯಕ್ರಮಗಳಾದ ರಸ್ತೆ ಬದಿ, ಹೆದ್ದಾರಿ, ಕಾಲುವೆ ಬದುಗಳು, ಕೈಗಾರಿಕಾ ಮತ್ತು ಶಿಕ್ಷಣ ಸಂಸ್ಥೆಗಳ ಮತ್ತು ದೇವಾಲಯಗಳ ಆವರಣಗಳಲ್ಲಿ ಸಸ್ಯ ನೆಡುವ ಕಾರ್ಯಕ್ರಮಗಳಲ್ಲಿ ಜೀವವೈವಿಧ್ಯತೆಯ ಅಂಶಗಳನ್ನು ಪ್ರೋತ್ಸಾಹಿಸುವುದು.

**ಯೋಜನೆ ಬಿ. ೨. ೧೦** ಪ್ರಾಣಿಗಳ ವಂಶವಾಹಿ ಸಂಪನ್ಮೂಲಗಳನ್ನು ಕಾಪಾಡುವುದಕ್ಕಾಗಿ ಹಾಗೂ ಜನರಿಗೆ ಅದು ದೊರಕುವಂತೆ ಮಾಡಲು ಸ್ಥಳೀಯ ಜಾನುವಾರು, ಕೋಳಿ ಹಾಗೂ ಸಾಕುಪ್ರಾಣಿಯ ತಳಿಗಳ ವಂಶಾಭಿವೃದ್ಧಿ ಪಡಿಸುವುದು.

## ಕಾರ್ಯತಂತ್ರ ೩

### ಜೀವವೈವಿಧ್ಯ ಸಂಪನ್ಮೂಲಗಳ ನಿರಂತರ ಬಳಕೆಯನ್ನು ಅಭಿವೃದ್ಧಿಗೊಳಿಸುವುದು

- ಜೀವವೈವಿಧ್ಯ ಸಂಪನ್ಮೂಲಗಳ ನಿರಂತರ ಬಳಕೆಯನ್ನು ಭೂದೃಶ್ಯ ಹಾಗೂ ಜಲದೃಶ್ಯಗಳ ಉತ್ಪನ್ನಗಳಲ್ಲಿ ಅಭಿವೃದ್ಧಿಗೊಳಿಸುವ ಅವಶ್ಯಕತೆ
- ಜೀವವೈವಿಧ್ಯ ಮೈತ್ರೀ ನಿರ್ವಹಣೆಯನ್ನು ರಾಜ್ಯ ಹಾಗೂ ಸಮುದಾಯ ನಿಯಂತ್ರಿತ ಭೂಮಿ ಹಾಗೂ ಜಲಗಳ ಮೇಲೆ ಅಭಿವೃದ್ಧಿಗೊಳಿಸುವ ಅವಶ್ಯಕತೆ

## ಕ್ರಿಯಾಯೋಜನೆ ೩

ಸೂಚಿತ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಚಟುವಟಿಕೆಗಳು

- ಔಷಧೀಯ ಸಸ್ಯಗಳು, ಮರ ಮತ್ತು ಕಿರು ಅರಣ್ಯ ಉತ್ಪನ್ನಗಳು, ಸಿಹಿ ನೀರಿನ ಮತ್ತು ಕಡಲಿನ ಮೀನುಗಳು ಹಾಗೂ ಚಿಪ್ಪು ಮೀನುಗಳಂತಹ ಜೀವಿ ಸಂಪನ್ಮೂಲಗಳ ನಿರಂತರ

ಬಳಕೆ ಹಾಗೂ ಜೀವವೈವಿಧ್ಯ ಮೈತ್ರೀ ವಿಧಗಳ ಬಳಕೆಯನ್ನು ಆಶ್ವಾಸಿಸುವುದರತ್ತ ಗಮನ ಹರಿಸುವುದು ಅಗತ್ಯವಾಗಿದೆ.

- ಕಾರ್ಯತಂತ್ರ ಹಾಗೂ ಕ್ರಿಯಾಯೋಜನೆಯ ವಿವಿಧ ವಿಭಾಗಗಳಲ್ಲಿ ಪರಸ್ಥಳೀಯ ಮತ್ತು ಸ್ವಸ್ಥಳೀಯ ಸಂರಕ್ಷಣೆ, ನೀತಿ ಹಾಗೂ ಕಾಯಿದೆ, ಸಾಮರ್ಥ್ಯ ಹೆಚ್ಚಿಸುವುದು, ಶಿಕ್ಷಣ, ಜಾಗೃತೀಕರಣ ಹಾಗೂ ಸಂಪರ್ಕಿಸುವುದನ್ನು ಸಂಘಟಿಸಬೇಕಾಗಿದೆ.

**ಯೋಜನೆ ೩. ೧.** ಔಷಧೀಯ ಸಸ್ಯಗಳ ನೈಸರ್ಗಿಕ ಸಂತತಿಯ ನಿರಂತರ ಬಳಕೆಯನ್ನು ಪ್ರೋತ್ಸಾಹಿಸುವುದು.

**ಯೋಜನೆ ೩. ೨.** ಮರಮುಟ್ಟು ಸಂಪನ್ಮೂಲಗಳ ನಿರಂತರ ಬಳಕೆಯನ್ನು ಪ್ರೋತ್ಸಾಹಿಸುವುದು

**ಯೋಜನೆ ೩. ೩.** ಕಿರು ಅರಣ್ಯ ಉತ್ಪನ್ನಗಳ ನಿರಂತರ ಬಳಕೆಯನ್ನು ಪ್ರೋತ್ಸಾಹಿಸುವುದು.

**ಯೋಜನೆ ೩. ೪.** ಸಿಹಿ ನೀರಿನ ಮೀನುಗಳ ಹಾಗೂ ಚಿಪ್ಪು ಮೀನು ಸಂತಾನಗಳ ನಿರಂತರ ಬಳಕೆಯನ್ನು ಪ್ರೋತ್ಸಾಹಿಸುವುದು.

**ಯೋಜನೆ ೩. ೫** ಸಾಗರ ಮೀನು ಹಾಗೂ ಚಿಪ್ಪು ಮೀನು ಸಂತತಿಗಳ ನಿರಂತರ ಬಳಕೆಯನ್ನು ಪ್ರೋತ್ಸಾಹಿಸುವುದು

## ಕಾರ್ಯತಂತ್ರ ೪

ಜೀವವೈವಿಧ್ಯತೆಯ ಸಂರಕ್ಷಣೆ; ಸುಸ್ಥಿರ ಬಳಕೆ; ಮತ್ತು ಲಾಭಗಳ ಸಮಾನ ಹಂಚಿಕೆಗೆ ಸಮಗ್ರ ನೀತಿ ಮತ್ತು ಶಾಸನಾತ್ಮಕ ಚೌಕಟ್ಟನ್ನು ರೂಪಿಸುವುದು.

- ಜೀವಿ ವೈವಿಧ್ಯತೆಯ ಸಂರಕ್ಷಣಾ ಪ್ರಯತ್ನಗಳನ್ನು ವಿಸ್ತಾರಗೊಳಿಸುವ ಸುಸ್ಥಿರ ಬಳಕೆಯೊಂದಿಗೆ ಮತ್ತು ಲಾಭಗಳ ಸಮಾನ ಹಂಚಿಕೆಯನ್ನು ಅದರೊಂದಿಗೆ ಸೇರ್ಪಡೆ ಮಾಡುವ ಅವಶ್ಯಕತೆ

## ಕಾರ್ಯಯೋಜನೆ ೪

ಸೂಚಿತ ಕಾರ್ಯಕ್ರಮಗಳು, ಯೋಜನೆಗಳು ಮತ್ತು ಕಾರ್ಯ ಚಟುವಟಿಕೆಗಳು

**ಯೋಜನೆ ೪. ೧.** ಕಾರ್ಯನಿರತ ಪೌರ ವ್ಯವಸ್ಥೆಯಲ್ಲಿ ಜೀವವೈವಿಧ್ಯ ಕಾಳಜಿಯನ್ನು ಸೇರ್ಪಡಿಸುವುದು.

- ಜೀವ ವೈವಿಧ್ಯ ಸಂರಕ್ಷಣೆ ಹಾಗೂ ನಿರಂತರ ಬಳಕೆಯ ಗ್ರಹಿಕೆಯಿಂದ ಹಾಲಿ ಇರುವ ಕಾನೂನು ಹಾಗೂ ಶಾಸನದ ಚೌಕಟ್ಟನ್ನು ಗ್ರಾಮಸಭೆ, ಗ್ರಾಮ ಪಂಚಾಯತ್, ನಗರಸಭೆ

ಹಾಗೂ ಮಹಾನಗರಪಾಲಿಕಾ ವ್ಯವಸ್ಥೆಯಿಂದ ಜಿಲ್ಲಾ ಪರಿಷತ್‌ವರೆಗಿನ ವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕಾಗಿದೆ.

**ಯೋಜನೆ ೪. ೨. ರಾಜ್ಯ - ಜಿಲ್ಲಾ - ಪಂಚಾಯಿತಿ ಹಂತದ ಜೀವವೈವಿಧ್ಯ ನಿರ್ವಹಣಾ ಸಂಸ್ಥೆಗಳ ಸ್ಥಾಪನೆ**

- ಜೀವ ವೈವಿಧ್ಯ ಶಾಸನ - ೨೦೦೦, ರಾಜ್ಯ ಜೀವ ವೈವಿಧ್ಯ ಮಂಡಳಿ ಮತ್ತು ಸ್ಥಳೀಯ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸ್ಥಾಪನೆಗೆ ಸಲಹೆ ನೀಡಿದೆ.
- ಹೊರ ಹೊಮ್ಮುತ್ತಿರುವ ಸವಾಲುಗಳನ್ನು ನಿರ್ವಹಿಸಲು ನಾಗರಿಕ ಸಮಾಜದ ಭಾಗವಹಿಸುವಿಕೆಯುಳ್ಳ ವಿಶಾಲ ತಳಹದಿಯ ಹೊಸ ಸಂಸ್ಥೆಗಳ ಪೋಷಣೆಯ ಸಾಧ್ಯತೆ.

**ಯೋಜನೆ ೪. ೩. ಜೈವಿಕ ಸಂಪನ್ಮೂಲಗಳು ಮತ್ತು ಜೀವವೈವಿಧ್ಯತೆಯ ಬಳಕೆಗಾಗಿ - ಪ್ರವೇಶ ಶುಲ್ಕ, ಉತ್ತೇಜಕಗಳು ಮತ್ತು ದಂಡಗಳಂತಹ ನೈಜ ಆರ್ಥಿಕ ಸಾಧನಗಳ ಅಭಿವೃದ್ಧಿ.**

- ಧನಾತ್ಮಕ ಉತ್ತೇಜಕಗಳನ್ನೊಳಗೊಂಡಂತೆ ಹೊಸ ಸಾಧನಗಳನ್ನು ಅಭಿವೃದ್ಧಿಪಡಿಸುವ ಅವಶ್ಯಕತೆ
- ಜೀವವೈವಿಧ್ಯ ಸಂರಕ್ಷಣೆ ಹಾಗೂ ನಿರಂತರ ಬಳಕೆಯು ಮಹಿಳೆಯರ ಜೀವನ ಕ್ರಮ ಹಾಗೂ ಜನಸಂಖ್ಯೆಯ ದುರ್ಬಲ ವರ್ಗದವರ ಜೀವನಕ್ರಮ ಗುಣಮಟ್ಟವನ್ನು ಸುಧಾರಿಸಲು ಸಹಾಯಕವಾಗುವಂತೆ ನಿಖರ ಪಡಿಸಬೇಕಾಗಿದೆ.
- ಜೀವವೈವಿಧ್ಯ ಸಂಪನ್ಮೂಲಗಳ ನಿರಂತರ ಸಂರಕ್ಷಣೆ ಹಾಗೂ ಬಳಕೆಯನ್ನು ಅಭಿವೃದ್ಧಿಗೊಳಿಸಲು ಭೂಹಿಡುವಳಿ ವ್ಯವಸ್ಥೆಗಳನ್ನು ಸುದಾರಿಸಬೇಕಾಗಿದೆ.
- ಪರಿಸರ ಪ್ರವಾಸೋದ್ಯಮದಿಂದ ಬಂದಂತಹ ಸಂಪನ್ಮೂಲಗಳಿಂದ ಸಂರಕ್ಷಣಾ ಪ್ರಯತ್ನಗಳನ್ನು ಬಲಪಡಿಸಬಹುದು.
- ಸಂಪರ್ಕ ಶುಲ್ಕ, ಸಂಗ್ರಹ ಶುಲ್ಕಗಳಂತಹ ಶುಲ್ಕ ಸಂಗ್ರಹ ಹಕ್ಕು ನೀಡುವ ಮೂಲಕ ಪಂಚಾಯಿತಿಗಳು ಅಥವಾ ಗ್ರಾಮ ಅರಣ್ಯ ಸಮಿತಿಗಳು ಅಥವಾ ಜಂಟೀ ಮೀನುಗಾರಿಕಾ ನಿರ್ವಹಣಾ ಸಮಿತಿಗಳನ್ನು ಮನ ಒಲಿಸಬಹುದು.
- ಉಲ್ಲಂಘಕರ ಮೇಲೆ ದಂಡ ವಿಧಿಸುವ ಅಧಿಕಾರವನ್ನು ಪಂಚಾಯಿತಿಗಳಿಗೆ ಅಥವಾ ಗ್ರಾಮ ಅರಣ್ಯ ಸಮಿತಿಗಳಿಗೆ ಅಥವಾ ಜಂಟಿ ಮೀನುಗಾರಿಕಾ ನಿರ್ವಹಣಾ ಸಮಿತಿಗಳಿಗೆ ನೀಡಬಹುದು.
- ಉತ್ತಮ ಕಾರ್ಯ ಸಾಧನೆಗೆ ಪಂಚಾಯಿತಿಗಳಿಗೆ ಗ್ರಾಮ ಅರಣ್ಯ ಸಮಿತಿಗಳಿಗೆ ಮತ್ತು ಜಂಟೀ ಮೀನುಗಾರಿಕಾ ನಿರ್ವಹಣಾ ಸಮಿತಿಗಳಿಗೆ ವಿಶೇಷ ಬಹುಮಾನಗಳನ್ನು ನೀಡಬಹುದು.

- ಜೀವವೈವಿಧ್ಯತೆಯ ಸಂರಕ್ಷಣೆಯಲ್ಲಿ ಪ್ರಯತ್ನಗಳನ್ನು ಮಾಡುವ ಪಂಚಾಯಿತಿಗಳಿಗೆ ಗ್ರಾಮ ಅರಣ್ಯ ಸಮಿತಿಗಳಿಗೆ, ಜಂಟೀ ಮೀನುಗಾರಿಕಾ ನಿರ್ವಹಣಾ ಸಮಿತಿಗಳಿಗೆ ವಿಶೇಷ ಸಾಮಾಜಿಕ ಮಾನ್ಯತೆ ನೀಡಬಹುದು.

ಯೋಜನೆ ೪. ೪ ಆವಾಸಗಳ ಸಂಪರ್ಕತೆ ಹಾಗೂ ವಿಶಾಲ ತಳಹದಿಯ ಜೀವವೈವಿಧ್ಯ ವಿಷಯಗಳನ್ನು ಪರಿಸರದ ಮೇಲಿನ ಒತ್ತಡದ ಮೌಲ್ಯಮಾಪನಕ್ಕೆ ಸೇರ್ಪಡಿಸುವುದನ್ನು ಪರಿಗಣಿಸುವುದು.

- ಹಾಲಿ ಪರಿಸರಾತ್ಮಕ ಪರಿಣಾಮದ ಮೌಲ್ಯಮಾಪನ ಕ್ರಮಗಳು. ಜೀವವೈವಿಧ್ಯತೆಯಂತಹ ವಿಶಾಲ ತಳಹದಿಯ ವಿಷಯಗಳಿಗೆ ಅಸಮರ್ಪಕ ಗಮನ ನೀಡುತ್ತಿವೆ.
- ಹಾಲಿ ಪರಿಸರಾತ್ಮಕ ಪರಿಣಾಮದ ಮೌಲ್ಯಮಾಪನ ಕ್ರಮಗಳು ಆವಾಸ ಸಂಪರ್ಕದಂತಹ ವಿಷಯಗಳನ್ನು ಪರಿಗಣಿಸದಿರುವುದು.

ಯೋಜನೆ ೪. ೫ ಸಿಹಿನೀರಿನ ಜೀವವೈವಿಧ್ಯತೆಯ ರಕ್ಷಣೆಗೆ ನೀತಿ ಮತ್ತು ನಿಯಂತ್ರಣ ಚೌಕಟ್ಟನ್ನು ಸೃಷ್ಟಿಸುವುದು

- ಸಿಹಿನೀರಿನ ಜೀವವೈವಿಧ್ಯ ಆವಾಸಗಳು ಜಲ ಸಂಪನ್ಮೂಲಗಳಾಗಿ ಮತ್ತು ಮಾಲಿನ್ಯಗಳ ತೊಟ್ಟಿಗಳಾಗಿ ಅತ್ಯಂತ ತೀವ್ರ ಒತ್ತಡಕ್ಕೊಳಗಾಗಿವೆ.
- ಕೃಷಿ ಅಥವಾ ನಗರ ಸಂರಚನಾ ಸೌಕರ್ಯಗಳಂತಹ ಪರ್ಯಾಯ ಭೂ ಬಳಕೆಯ ಬೇಡಿಕೆಗಳಿಂದಾಗಿ ಸಿಹಿನೀರಿನ ಜೀವವೈವಿಧ್ಯ ಆವಾಸಗಳು ಅತ್ಯಂತ ತೀವ್ರ ಒತ್ತಡಕ್ಕೊಳಗಾಗಿವೆ.
- ಮೀನು ಮತ್ತು ಏಡಿ ಮೀನು ಆಹಾರ ಜೀವಿಗಳಾಗಿ ಒತ್ತಡಕ್ಕೆ ಸಿಲುಕಿವೆ.
- ಸಿಡಿಮದ್ದು ಸಿಡಿಸುವುದು, ಅಕಾಲದಲ್ಲಿ ಮೀನುಗಾರಿಕೆ ಮುಂದುವರಿಸುವುದು, ವಿನಾಶಕಾರಿ ಮೀನುಗಾರಿಕಾ ವಿಧಾನಗಳಿಗೆ ಉದಾಹರಣೆಗಳಾಗಿವೆ.
- ಮೀನುಗಾರಿಕಾ ಇಲಾಖೆ ಉತ್ಪಾದನಾ ಹೆಚ್ಚಳಕ್ಕೆ ಜಲಕೃಷಿ ಮತ್ತು ಹೆಚ್ಚು ಸಮರ್ಥವಾದ ಕೊಯ್ಲು (ಮೀನು ಹಿಡಿಯುವ) ವಿಧಾನಗಳ ಗಮನ ಕೇಂದ್ರೀಕರಿಸಿದೆ.
- ಸದ್ಯದ ವನ್ಯ ಜೀವಿ ರಕ್ಷಣಾ ಕ್ರಮಗಳು ಜಲೀಯ ವೈವಿಧ್ಯತೆಗೆ ಕನಿಷ್ಠ ಗಮನ ನೀಡಿದೆ.
- ಹೊಸ ಸಂಸ್ಥೆಗಳ ಮತ್ತು ಸಾಧನಗಳ ಬಗ್ಗೆ ವಿಸ್ತೃತ ಸಮಾಲೋಚನೆಯ ಅಗತ್ಯವಿದೆ.

  ಉದಾ:- ಜಂಟಿ ಮೀನುಗಾರಿಕಾ ನಿರ್ವಹಣಾ ಸಮಿತಿಗಳು ಹಾಗೂ ಹೊಸ ಸಾಧನಗಳು.

ಯೋಜನೆ ೪. ೬ ಕಡಲ ತೀರದ ಹಾಗೂ ಸಾಗರದ ಜೀವವೈವಿಧ್ಯತೆಯ ರಕ್ಷಣೆಗೆ ನೀತಿ ಮತ್ತು ನಿಯಂತ್ರಣ ಚೌಕಟ್ಟನ್ನು ಸೃಷ್ಟಿಸುವುದು

- ಕಡಲ ತೀರದ ಹಾಗೂ ಸಾಗರದ ಜೀವವೈವಿಧ್ಯ ಆವಾಸಗಳು ಜಲ ಸಂಪನ್ಮೂಲಗಳಾಗಿ ಮತ್ತು ಮಾಲಿನ್ಯಗಳ ತೊಟ್ಟಿಗಳಾಗಿ ಅತ್ಯಂತ ತೀವ್ರ ಒತ್ತಡಕ್ಕೊಳಗಾಗಿವೆ.
- ಮೀನು ಮತ್ತು ಚಿಪ್ಪು ಮೀನು ಆಹಾರ ಜೀವಿಗಳಾಗಿ ಒತ್ತಡಕ್ಕೆ ಸಿಲುಕಿವೆ.
- ವಿನಾಶಕಾರಿ ಮೀನುಗಾರಿಕಾ ವಿಧಾನಗಳಾದ ಸಣ್ಣ ಕಣ್ಣಿನ ಬಲೆಗಳ ಬಳಕೆ ಹಾಗೂ ನಿರ್ಬಂದಿತ ಕಾಲದಲ್ಲಿ ಮೀನುಗಾರಿಕೆಯ ಮೇಲೆ ನಿಯಂತ್ರಣದ ಅಭಾವ, ಸಮಸ್ಯೆಗಳಿಗೆ ಉದಾಹರಣೆಗಳು.
- ಮೀನುಗಾರಿಕಾ ಇಲಾಖೆ ಉತ್ಪಾದನಾ ಹೆಚ್ಚಳಕ್ಕೆ ಜಲಕೃಷಿ ಮತ್ತು ಹೆಚ್ಚು ಸಮರ್ಥವಾದ ಕೊಯ್ಲು (ಮೀನು ಹಿಡಿಯುವ) ವಿಧಾನಗಳ ಗಮನ ಕೇಂದ್ರೀಕರಿಸಿದೆ.
- ಸದ್ಯದ ವನ್ಯ ಜೀವಿ ಸಂರಕ್ಷಣಾ ಕ್ರಮಗಳು ಸಾಗರದ ವೈವಿಧ್ಯತೆಗೆ ಕನಿಷ್ಠ ಗಮನ ನೀಡಿದೆ.
- ಹೊಸ ಸಂಸ್ಥೆಗಳ ಮತ್ತು ಸಾಧನಗಳ ಬಗ್ಗೆ ವಿಸ್ತೃತ ಸಮಾಲೋಚನೆಯ ಅಗತ್ಯವಿದೆ.

ಉದಾ:- ಜಂಟಿ ಮೀನುಗಾರಿಕಾ ನಿರ್ವಹಣಾ ಸಮಿತಿಗಳು ಹಾಗೂ ಹೊಸ ಸಾಧನಗಳು.

ಯೋಜನೆ ೪. ೭ ಖಾಸಗಿ, ಸಮುದಾಯ ಮತ್ತು ಇತರ ಅರಣ್ಯೇತರ ಭೂಮಿಗಳು ಮತ್ತು ಜಲ ಪ್ರದೇಶಗಳಲ್ಲಿ ಜೀವಿ ವೈವಿಧ್ಯತೆಯ ರಕ್ಷಣೆಗೆ ನೀತಿ, ಪ್ರೋತ್ಸಾಹ ಮತ್ತು ನಿಯಂತ್ರಣ ಚೌಕಟ್ಟನ್ನು ರೂಪಿಸುವುದು.

- ಹೊಸ ಸಾಧನಗಳಾದ ಧನಾತ್ಮಕ ಪ್ರೋತ್ಸಾಹಗಳನ್ನು ಅಭಿವೃದ್ಧಿಪಡಿಸಬೇಕಾದ ಅವಶ್ಯಕತೆ.
- ಸೀಮಿತ ವ್ಯಾಪ್ತಿಯುಳ್ಳ ಜೀವವೈವಿಧ್ಯತೆಯ ಶ್ರೀಮಂತ ತಾಣಗಳಾದ ಪವಿತ್ರ ವನಗಳು, ಅಥವಾ ಕೊಕ್ಕರೆ ಸಂರಕ್ಷಣಾ ತಾಣಗಳನ್ನು ರಕ್ಷಿಸುವ ಅವಶ್ಯಕತೆ.
- ಇಂತಹ ತಾಣಗಳು ಹೆಚ್ಚಾಗಿ ಖಾಸಗಿ ಅಥವಾ ಕಂದಾಯ ಭೂಮಿಗಳಲ್ಲಿರುತ್ತವೆ.
- ಜೈವಿಕ ವೈವಿಧ್ಯ ಶಾಸನ ೨೦೦೦ ಜೀವವೈವಿಧ್ಯತೆಯುಳ್ಳ ಶ್ರೀಮಂತ ತಾಣಗಳನ್ನು ಪಾರಂಪರಿಕ ಕ್ಷೇತ್ರಗಳೆಂದು ಪರಿಗಣಿಸಲು ಅವಕಾಶ ಕಲ್ಪಿಸಿವೆ.
- ಪ್ರಾಚ್ಯ ವಸ್ತು ಸ್ಥಳಗಳ ಸಂರಕ್ಷಣಾ ನಿಯಮಗಳು ವಿಶೇಷ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆಯುಳ್ಳ ಸ್ಥಳಗಳನ್ನು ಸಂರಕ್ಷಿಸಲು ಆಕರ್ಷಕ ಸಾಧ್ಯ ಮಾದರಿಗಳನ್ನೊದಗಿಸುತ್ತವೆ.
- ಹೊಸ ಸಂಸ್ಥೆ ಮತ್ತು ಸಾಧನಗಳ ಬಗ್ಗೆ ವಿವರಿಸುವ ಅಗತ್ಯವಿದೆ.

**ಯೋಜನೆ ೪. ೮** ಜೀವವೈವಿಧ್ಯತೆ ಶ್ರೀಮಂತವಾದ ಅರಣ್ಯ ಪ್ರದೇಶ ಮತ್ತು ಸಂರಕ್ಷಿತ ಪ್ರದೇಶಗಳಲ್ಲಿ ಜಂಟೀ ನಿರ್ವಹಣೆಗಾಗಿ ನೀತಿ ಮತ್ತು ನಿಯಂತ್ರಣಾ ಚೌಕಟ್ಟನ್ನು ರೂಪಿಸಬೇಕಾಗಿದೆ.

- ಜಂಟೀ ಅರಣ್ಯ ಸಂರಕ್ಷಣೆ ಮತ್ತು ನಿರ್ವಹಣೆಯ ಪ್ರಯತ್ನಗಳನ್ನು ಜೀವವೈವಿಧ್ಯತೆ ಶ್ರೀಮಂತ ಪ್ರದೇಶಗಳಿಗೆ ವಿಸ್ತರಿಸಲು ಹೊಸ ಸಂಸ್ಥೆ ಮತ್ತು ಸಾಧನಗಳ ಅಗತ್ಯಗಳ ಬಗ್ಗೆ ವಿಸ್ತರಿಸಬೇಕಾಗಿದೆ.

**ಯೋಜನೆ ೪. ೯** ಅರಣ್ಯ ಪ್ರದೇಶಗಳ ಜೀವವೈವಿಧ್ಯದ ನಿರ್ವಹಣೆಗಾಗಿ ನೀತಿ ಮತ್ತು ನಿಯಂತ್ರಣಾ ಚೌಕಟ್ಟನ್ನು ರೂಪಿಸಬೇಕಾಗಿದೆ.

- ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣಾ ಹಕ್ಕಿನ ಹರಾಜು ಮತ್ತು ಸಂಪೂರ್ಣ ಕಟಾವಿನ ಪದ್ಧತಿಗಳನ್ನು ಮೊಟಕುಗೊಳಿಸಬೇಕಾಗಿದೆ.

**ಯೋಜನೆ ೪. ೧೦** ಸ್ವಸ್ಥಾನೀಯ ಕೃಷಿ - ಜೀವವೈವಿಧ್ಯದ ರಕ್ಷಣೆಗಾಗಿ ನೀತಿ ಮತ್ತು ನಿಯಂತ್ರಣಾ ಚೌಕಟ್ಟನ್ನು ರೂಪಿಸಬೇಕಾಗಿದೆ.

- ಕೃಷಿ ಅಭಿವೃದ್ಧಿಯು ಹೆಚ್ಚುವರಿ ಇಳುವರಿ ಕೊಡುವ ತಳಿಗಳನ್ನು ವೃದ್ಧಿಸುವತ್ತ ಕೇಂದ್ರೀಕರಿಸುತ್ತಿರುವುದರಿಂದ ಪಾರಂಪರಿಕ ತಳಿ ಮತ್ತು ಜೀವ ವೈವಿಧ್ಯತೆ ಕ್ಷೀಣಿಸುತ್ತಿದೆ.
- ಸಾವಯವ ಕೃಷಿ ಮತ್ತು ಹಸಿರು ಮಾರುಕಟ್ಟೆಗಳನ್ನು ಪ್ರೋತ್ಸಾಹಿಸುವ ಸಂಸ್ಥೆಗಳು ಹಾಗೂ ಸಾಧನಗಳನ್ನು ವಿಸ್ತರಿಸಬೇಕಾಗಿದೆ.
- ಕೋಳಿ ಹಾಗು ಸಾಕು ಪ್ರಾಣಿಗಳ ಸ್ಥಳೀಯ ತಳಿಗಳ ಸಂರಕ್ಷಣೆಗೆ ಸೌಕರ್ಯವನ್ನು ಕಲ್ಪಿಸಿಕೊಡಬೇಕಾಗಿದೆ.
- ಕೃಷಿ ಜೀವವೈವಿಧ್ಯ ಸಂಪನ್ಮೂಲಗಳ ಸೇವೆಯಲ್ಲಿರುವ ಬುಡಕಟ್ಟು ಜನಾಂಗದವರು, ಸಣ್ಣ ಹಿಡುವಳಿಯ ರೈತರು ಹಾಗೂ ಜಾನುವಾರು ಮೇಯಿಸುವವರನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕಾಗಿದೆ.
- ಪೌಷ್ಠಿಕ ಮೌಲ್ಯಕ್ಕಾಗಿ ಬೆಳೆ ವೈವಿಧ್ಯಕ್ಕೆ ಪ್ರಾಮುಖ್ಯತೆಯನ್ನು ಕೊಡುವ ಜೀವಿಗಳ ನಿರ್ವಾಹಕರಾಗಿರುವ ಮಹಿಳೆಯರನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕಾಗಿದೆ.

**ಚಟುವಟಿಕೆ ೪. ೧** ನೀತಿಗಳ ವಕೀಲತ್ವ

- ಜೀವವೈವಿಧ್ಯಕ್ಕೆ ಸಂಬಂಧಿಸಿದ ನೀತಿಗಳ ಬಗ್ಗೆ ಸಾರ್ವಜನಿಕ ಚರ್ಚೆಗಳಾಗುವಂತಹ ಹೊಸ ವಿಚಾರಗಳನ್ನು ಪ್ರೋತ್ಸಾಹಿಸಬೇಕಾಗಿದೆ.

**ಚಟುವಟಿಕೆ ೪. ೨ ಜೀವವೈವಿಧ್ಯ ನಷ್ಟವನ್ನು ಭರಿಸಲು ಪರಿಹಾರ ಚಟುವಟಿಕೆಗಳ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ಸಿದ್ಧಪಡಿಸುವುದು.**

- ಸದ್ಯದ ಆಸ್ಪದಗಳಲ್ಲಿ, ಉದಾಹರಣೆಗೆ ಪರಿಹಾರಕ್ರಮವಾಗಿ ಅರಣ್ಯೀಕರಣವು ಜೀವರಾಶಿ ಹಾಗೂ ಜೀವವೈವಿಧ್ಯದ ನಷ್ಟವನ್ನು ಭರಿಸುವಲ್ಲಿ ಸಾಕಷ್ಟು ಪ್ರತಿಕ್ರಿಯಿಸುವುದಿಲ್ಲ.

**ಚಟುವಟಿಕೆ ೪. ೩ ಜಮೀನು ಬಳಕೆಯ ಯೋಜನೆ ಮತ್ತು ಜೀವವೈವಿಧ್ಯ ಸಂರಕ್ಷಣೆ ಹಾಗೂ ಸಂಬಂಧಪಟ್ಟ ಇಲಾಖೆಗಳ ಯೋಜನೆಗಳಲ್ಲಿ ಇವುಗಳನ್ನು ಒಗ್ಗೂಡಿಸುವುದು.**

- ಜೀವವೈವಿಧ್ಯದ ಸಂಪನ್ಮೂಲಗಳ ಮೇಲೆ ನೇರವಾಗಿ ಸಂಬಂಧಿಸಿದ ಚಟುವಟಿಕೆಗಳನ್ನು ಹೊಂದಿದ ಸರ್ಕಾರಿ ಇಲಾಖೆ ಮನ್ನಣೆಗಾಗಿ ಸರಿಯಾದ ಮಾರ್ಗದರ್ಶಿ ಸೂತ್ರಗಳನ್ನು ಸಿದ್ಧಪಡಿಸಬೇಕಾಗಿದೆ.
- ಆವಾಸಗಳ ಸಮಗ್ರತೆ ಹಾಗೂ ಜೊತೆಗೂಡಿಸುವುದರ ಮೇಲೆ ಕೇಂದ್ರೀಕರಿಸಬೇಕಾಗಿದೆ.
- ಪರಿಸರದ ಮೇಲಿನ ಪರಿಣಾಮಗಳ ಮೌಲ್ಯೀಕರಣಗಳಲ್ಲಿ ಸೂಚಿಸಿದಂತಹ ಸಲಹೆಗಳನ್ನು ಕಾರ್ಯಚರಣೆಗೆ ತರುವುದು ಅಗತ್ಯವಾಗಿದೆ.
- ಧಾರಣ ಶಕ್ತಿಗಳಂತಹ ವಿಚಾರಗಳನ್ನು ವಿಸ್ತಾರ ಪಡಿಸಬೇಕಾಗಿದೆ.
- ಅಂತರ್-ವಿಭಾಗಗಳ ಸಂಚಾಲನೆಗಳಿಗೆ ವ್ಯವಸ್ಥೆಯನ್ನು ಸೃಷ್ಟಿಸಬೇಕಾಗಿದೆ.
  ಉದಾ:- ಕರ್ನಾಟಕ ಗಿಡಮೂಲಿಕಾ ಪ್ರಾಧಿಕಾರದಂತಹ ಸಂಸ್ಥೆಗಳು

## ಕಾರ್ಯತಂತ್ರ ೫

ಜೀವವೈವಿಧ್ಯ ಸಂರಕ್ಷಣೆ ಹಾಗೂ ನಿರ್ವಹಣೆಗೆ ಒಗ್ಗೂಡಿಸುವಿಕೆ ಮತ್ತು ಸಂಸ್ಥೆಗಳಾಗಿಸುವುದಕ್ಕೆ ಅರ್ಹತೆಗಳನ್ನು ಬಲಪಡಿಸುವುದು.

- ಹೊಸ ವಿಚಾರಗಳು ಹಾಗೂ ಹೊಸ ಚಟುವಟಿಕೆಗಳಿಗೆ ಹೊಸ ಸಂಸ್ಥೆಗಳ ಮತ್ತು ಮಾನವ ಸಾಮರ್ಥ್ಯಗಳ ಅಭಿವೃದ್ಧಿಯ ಅವಶ್ಯಕತೆಯಿದೆ.

## ಕ್ರಿಯಾಯೋಜನೆ ೫

ಸೂಚಿತ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಚಟುವಟಿಕೆಗಳು

೫. ಎ. ಸಂಸ್ಥೆಗಳ ಸಾಮರ್ಥ್ಯ ಚಟುವಟಿಕೆಗಳು

**ಯೋಜನೆ ೫. ಎ. ೧. ಪೌರ ಸಂಸ್ಥೆಗಳಿಗೆ ಸಂಸ್ಥಾ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.**

- ಜೀವವೈವಿಧ್ಯ ಕಾಳಜಿಯತ್ತ ಸ್ಪಂದಿಸಲು ಗ್ರಾಮ ಸಭೆ ಹಾಗೂ ಗ್ರಾಮ ಪಂಚಾಯತ್‌ನಿಂದ ನಗರಸಭೆ, ಮಹಾನಗರಪಾಲಿಕೆ ಹಾಗೂ ಜಿಲ್ಲಾ ಪರಿಷತ್‌ನವರೆಗೆ ಪೌರ ಸಂಸ್ಥೆಗಳ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬೇಕಾಗಿದೆ.

ಯೋಜನೆ ೫. ಎ. ೨ ಅರಣ್ಯದ ಗಡಿಗಳು ಹಾಗೂ ಕಂದಾಯ ಜಮೀನು ಇರುವಿಕೆಗಳ ಆಧಾರದ ಮೇಲೆ ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಸೃಷ್ಟಿಸುವುದು.

- ಕಂದಾಯ ಹಾಗೂ ಅರಣ್ಯ ಇಲಾಖೆಗಳ ಖಾತೆಗಳ ಜಮೀನಿನ ವಿಭಾಗೀಕರಣದಲ್ಲಿರುವ ಗೊಂದಲವು ಜೀವವೈವಿಧ್ಯದ ಶ್ರೀಮಂತ ಪ್ರದೇಶಗಳಿಗೆ ಮಹತ್ತರವಾದ ಅಪಾಯವಾಗಿದೆ.
- ಭೌಗೋಳಿಕ ಮಾಹಿತಿ ವ್ಯವಸ್ಥೆಯಂತಹ ಆಧುನಿಕ ಮಾಹಿತಿ ತಂತ್ರಜ್ಞಾನ ಪರಿಕಾರಗಳು ಇಂತಹ ಸಮಸ್ಯೆಗಳನ್ನು ನಿವಾರಿಸಬಹುದು.

ಯೋಜನೆ ೫. ಎ. ೩ ರಕ್ಷಿತ ಪ್ರದೇಶಗಳ ಗಡಿಗಳ ಬಗ್ಗೆ ಉಪಗ್ರಹ ಪ್ರತಿಬಿಂಬ ಆಧಾರಿತ ಮಾಹಿತಿ ಮೂಲವನ್ನು ಸೃಷ್ಟಿಸುವುದು.

- ನಡೆಯುತ್ತಿರುವ ಒತ್ತುವರಿಯು ಜೀವವೈವಿಧ್ಯ ಶ್ರೀಮಂತ ಪ್ರದೇಶಗಳಿಗೆ ಮಹತ್ತರವಾದ ಅಪಾಯವಾಗಿದೆ.
- ಒತ್ತುವರಿಯ ಮಟ್ಟ ಹಾಗೂ ಕಾಲದ ಬಗ್ಗೆ ನಂಬುವಂತಹ ಆಧಾರಗಳನ್ನು ನೀಡುವ ಉಪಗ್ರಹ ಪ್ರತಿಬಿಂಬಗಳು, ಅವುಗಳನ್ನು ನಿಯಂತ್ರಿಸಲು ಒಂದು ಶಕ್ತಿಯುತ ಸಾಧನವಾಗಿರುತ್ತದೆ.
- ಆವಾಸ ದಾರಿಗಳ ವಿಚ್ಛೇದನವನ್ನು ತಡೆಯುವುದು ಅಗತ್ಯವಾಗಿದೆ.

ಯೋಜನೆ ೫.ಎ. ೪ ಜೌಗು ಪ್ರದೇಶಗಳ ಗಡಿಯ ಬಗ್ಗೆ ಉಪಗ್ರಹ ಪ್ರತಿಬಿಂಬ ಆಧಾರಿತ ಮಾಹಿತಿ ಮೂಲಗಳನ್ನು ಸೃಷ್ಟಿಸುವುದು.

- ಚಾಲಿತ ಒತ್ತುವರಿಗಳು ಸಮೃದ್ಧ ಜೀವವೈವಿಧ್ಯ ತರಿ ಪ್ರದೇಶಗಳ ಮೇಲೆ ಮಹತ್ತರವಾದ ಅಪಾಯವಾಗಿರುತ್ತದೆ.
- ಉಪಗ್ರಹ ಪ್ರತಿಬಿಂಬಗಳು ಒತ್ತುವರಿಯಾದ ಕಾಲ ಹಾಗೂ ವಿಸ್ತರಣೆಯ ಬಗ್ಗೆ ನಂಬಲರ್ಹವಾದ ಆಧಾರವನ್ನು ಒದಗಿಸುತ್ತದೆ.

ಯೋಜನೆ ೫. ಎ. ೫ ಕರಾವಳಿ ತೀರದ ಉಪಗ್ರಹ ಪ್ರತಿಬಿಂಬ ಆಧಾರಿತ ಮಾಹಿತಿ ಮೂಲವನ್ನು ಸೃಷ್ಟಿಸುವುದು.

- ಈಗ ಆಗುತ್ತಿರುವ ಒತ್ತುವರಿಯು ಜೀವವೈವಿಧ್ಯ ಶ್ರೀಮಂತ ಕರಾವಳಿ ಸ್ಥಳಗಳಿಗೆ ಮಹತ್ತರವಾದ ಅಪಾಯವಾಗಿದೆ.

- ಒತ್ತುವರಿಯ ಕಾಲ ಹಾಗೂ ವ್ಯಾಪ್ತಿಯ ನಂಬಲಾರ್ಹ ಪುರಾವೆಗಳನ್ನು ಉಪಗ್ರಹ ಪ್ರತಿಬಿಂಬಗಳು ನೀಡುವುದಲ್ಲದೆ ಅದನ್ನು ನಿಯಂತ್ರಿಸಲು ಬಹಳ ಶಕ್ತಿಯುತ ಸಾಧನವಾಗುತ್ತದೆ.

**ಯೋಜನೆ ೫. ಎ. ೬. ರಾಜ್ಯ ಹಾಗೂ ಜಿಲ್ಲಾಮಟ್ಟದ ಜೀವವೈವಿಧ್ಯ ಮಾಹಿತಿ ವ್ಯವಸ್ಥೆಯ ಸ್ಥಾಪನೆ**

- ಬಹು ಮಾಪಕ, ಬಹು ಸಂಘಟನೆಗಳನ್ನು ಜೋಡಿಸುವ ಗಣಕೀಕೃತ, ಬಹುಹಂತದ, ಬಹುಸಂಸ್ಥೆಯ ವಿಸ್ತೃತ ಜೀವವೈವಿಧ್ಯ ಮಾಹಿತಿ ವ್ಯವಸ್ಥೆಯು ಉತ್ತಮ ಸಾಧನವಾಗುತ್ತದೆ.
- ಕರ್ನಾಟಕದ ಮಾಹಿತಿ ತಂತ್ರಜ್ಞಾನದ ಬಲವನ್ನು ಬಂಡವಾಳದಾಯಕವಾಗಿಸುವುದು.

**ಯೋಜನೆ ೫. ಎ. ೭. ಬೌದ್ಧಿಕ ಆಸ್ತಿಯ ಹಕ್ಕುಗಳ ವಿಷಯಗಳನ್ನು ನಿಭಾಯಿಸುವ ಶಕ್ತಿಗಳನ್ನು ಬಲಿಷ್ಠಗೊಳಿಸುವುದು**

- ಎಲ್ಲಾ ವಿಭಾಗಗಳಲ್ಲಿ ಬಲಿಷ್ಠಗೊಳಿಸುವುದು ಹಾಗೂ ಜಾಗೃತಿ ಮೂಡಿಸುವುದು ಅತ್ಯಗತ್ಯ; ವಿಜ್ಞಾನಿಗಳು ಹಾಗೂ ತಂತ್ರಜ್ಞಾನಿಗಳು, ಸರ್ಕಾರಿ ಸಿಬ್ಬಂದಿಗಳು, ಖಾಸಗಿ ವಿಭಾಗ ಮತ್ತು ಸ್ಥಳೀಯ ಜ್ಞಾನ ಸಂಪನ್ನ ವ್ಯಕ್ತಿಗಳು

**ಯೋಜನೆ ೫. ಎ. ೮ ಸಾಗರದ ಜೀವವೈವಿಧ್ಯ ಸಂಪನ್ಮೂಲಗಳ ರಕ್ಷಣೆಗಾಗಿ ಕರಾವಳಿ ಕಾವಲುಗಾರರ ಶಕ್ತಿಯನ್ನು ವೃದ್ಧಿಸಬೇಕಾಗಿದೆ.**

- ಪ್ರಸ್ತುತ ತೆರೆದ ಸಾಗರದಲ್ಲಿನ ಮೀನುಗಾರಿಕೆಯನ್ನು ನಿಯಂತ್ರಿಸಲು ಒತ್ತಡ ತರುವ ಯಾವುದೇ ವಿಧದ ಸಲಕರಣೆಗಳು ನಮ್ಮಲ್ಲಿಲ್ಲ.
- ಈ ನಿಟ್ಟಿನಲ್ಲಿ ಪಾತ್ರವನ್ನು ವಹಿಸಲು ಕರಾವಳಿ ಕಾವಲುಗಾರರ ಶಕ್ತಿಯನ್ನು ಹೆಚ್ಚಿಸಬೇಕಾಗಿದೆ.

**ಯೋಜನೆ ೫. ಎ. ೯. ವಿವಿಧ ಸ್ಥರಗಳಲ್ಲಿ ಜೀವವೈವಿಧ್ಯ ನಿರ್ವಹಣೆಯ ಸಂಘಟನೆಗಳ ಕಾರ್ಯನಿರ್ವಹಿಸುವಿಕೆಯ ಗುಣಮಟ್ಟವನ್ನು ಹೆಚ್ಚಿಸಲು ಸರ್ಕಾರೇತರ ಸಂಸ್ಥೆಗಳ ಪಾತ್ರವನ್ನು ಎತ್ತಿ ಹಿಡಿಯಬೇಕಾಗಿದೆ.**

- ಜೀವವೈವಿಧ್ಯ ರಕ್ಷಣೆಗಾಗಿ ಸರ್ಕಾರೇತರ ಸಂಸ್ಥೆಗಳ ಮಹತ್ವದ ಕಾವಲು ಪಾತ್ರವನ್ನು ಸಾರ್ವಜನಿಕರೊಂದಿಗೆ ನಿರ್ವಹಿಸುವುದು.
- ರಾಜ್ಯ, ಜಿಲ್ಲಾ ಹಾಗೂ ಪಂಚಾಯತ್ ಮಟ್ಟಗಳಲ್ಲಿನ ಸಮಿತಿಯ ಸದಸ್ಯತ್ವಕ್ಕೆ ಸರ್ಕಾರೇತರ ಸಂಸ್ಥೆಗಳು ಸೇರ್ಪಡೆಯಾಗಲು ವ್ಯವಸ್ಥಿತ ಮಾರ್ಗವನ್ನು ಸೃಷ್ಟಿಸಬೇಕಾಗಿದೆ. ಸಾರ್ವಜನಿಕ

ಹೇಳಿಕೆಗಳು ಹಾಗೂ ಇತರ ವಿಧಗಳ ಮೂಲಕ ಮಾಹಿತಿಗೆ ಸಂಬಂಧಪಟ್ಟಂತೆ ಸಂಪೂರ್ಣ ಹಕ್ಕನ್ನು ಪಡೆಯಲು ಸಹಕರಿಸಬೇಕಾಗಿದೆ.

**ಯೋಜನೆ ೫. ಎ. ೧೦. ಪರಿಸರದ ಮೇಲಿನ ಪರಿಣಾಮ ಮಾಪನದ ಗುಣಮಟ್ಟವನ್ನು ಹೆಚ್ಚಿಸಬೇಕಾಗಿದೆ.**

- ರಾಜ್ಯ ಜೀವವೈವಿಧ್ಯ ಮಂಡಳಿಯಂತಹ ಅಧಿಕಾರಿ ವ್ಯವಸ್ಥೆಗಳು ಪರಿಸರದ ಮೇಲಿನ ಪರಿಣಾಮ ಮಾಪನ ಕಾರ್ಯವನ್ನು ಕೈಗೊಳ್ಳುವ ಸಂಸ್ಥೆಗಳ ಸ್ವತಂತ್ರ ಆಯ್ಕೆಯನ್ನು ದೃಢೀಕರಿಸಬೇಕು.
- ರಾಜ್ಯ ಜೀವವೈವಿಧ್ಯ ಮಂಡಳಿಯಂತಹ ಅಧಿಕಾರಿ ವ್ಯವಸ್ಥೆಗಳು ಪರಿಸರದ ಮೇಲಿನ ಪರಿಣಾಮ ಮಾಪನ ಕಾರ್ಯವನ್ನು ಸ್ವತಂತ್ರವಾಗಿ ಪರಿಶೀಲನೆಯನ್ನು ದೃಢೀಕರಿಸಬೇಕು.
- ಪರಿಸರದ ಮೇಲಿನ ಪರಿಣಾಮ ಮಾಪನ ಆಧಾರಿತ ಸಲಹೆಗಳನ್ನು ಸರಿಯಾಗಿ ಕಾರ್ಯಗತಗೊಳಿಸುವುದನ್ನು ಗಮನಿಸಲು ಸಂಸ್ಥೆಗಳಂತಹ ವ್ಯವಸ್ಥೆಯನ್ನು ಸೃಷ್ಟಿಸಬೇಕಾಗಿದೆ.

**ಯೋಜನೆ ೫ ಎ. ೧೧. ಪರಿಸರದ ಮೇಲಿನ ಪರಿಣಾಮ ಮಾಪನ ಕಾರ್ಯದಲ್ಲಿ ಗುಣಮಟ್ಟ ಸುಧಾರಿಸಲು ಸರ್ಕಾರೇತರ ಸಂಸ್ಥೆಗಳ ಪಾತ್ರವನ್ನು ಯೋಜಿಸಬೇಕಾಗಿದೆ.**

- ಸಾರ್ವಜನಿಕ ಹೇಳಿಕೆ ಹಾಗೂ ಇತರ ವ್ಯವಸ್ಥೆಗಳ ಮೂಲಕ ಮಾಹಿತಿಗೆ ಸಂಪೂರ್ಣ ಹಕ್ಕನ್ನು ನಿಗದಿಪಡಿಸಲು ಆ ಮಂಡಳಿಗಳ ಸದಸ್ಯತ್ವ ಪಡೆಯುವಿಕೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಭಾಗಿತ್ವಕ್ಕೆ ವ್ಯವಸ್ಥಿತವಾಗಿ ಸೃಷ್ಟಿಸಬೇಕಾಗಿದೆ.

**ಯೋಜನೆ ೫. ಎ. ೧೨ ಜೀವವೈವಿಧ್ಯದ ಮೇಲಿನ ಮಾಲಿನ್ಯದ ಪರಿಣಾಮಗಳ ನಿಗಾವಹಿಸುವಿಕೆಯ ಗುಣಮಟ್ಟದ ಸುಧಾರಣೆಗೆ ಸರ್ಕಾರೇತರ ಸಂಸ್ಥೆಗಳ ಪಾತ್ರವನ್ನು ಯೋಜಿಸಬೇಕಾಗಿದೆ.**

- ಸಾರ್ವಜನಿಕ ಹೇಳಿಕೆ ಹಾಗೂ ಇತರ ವ್ಯವಸ್ಥೆಗಳ ಮೂಲಕ ಮಾಹಿತಿಗೆ ಸಂಪೂರ್ಣ ಹಕ್ಕನ್ನು ನಿಗದಿಪಡಿಸಲು ಆ ಮಂಡಳಿಗಳ ಸದಸ್ಯತ್ವ ಪಡೆಯುವಿಕೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಭಾಗಿತ್ವಕ್ಕೆ ವ್ಯವಸ್ಥಿತವಾಗಿ ಸೃಷ್ಟಿಸಬೇಕಾಗಿದೆ.

**೫. ಬಿ. ಮಾನವ ಸಂಪನ್ಮೂಲಗಳ ಅಭಿವೃದ್ಧಿ**

**ಯೋಜನೆ ೫. ಬಿ. ೧. ಜೀವವೈವಿಧ್ಯದ ಯೋಜನೆ ಸಿದ್ಧಪಡಿಸುವಿಕೆಯ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಬೇಕಾಗಿದೆ.**

೧. ಖಾಸಗಿ ಸ್ಥರದ ಹಿಡುವಳಿದಾರರು

- ಔಷಧೀಯ ಸಂಸ್ಥೆಗಳನ್ನು, ಜೈವಿಕ ಮಾಹಿತಿಗಳನ್ನು, ಜೈವಿಕ ಸೌಂದರ್ಯವರ್ಧಕಗಳನ್ನು ಬೀಜ ಅಥವಾ ಪರಿಸರ ಪ್ರವಾಸೋದ್ಯಮದಂತಹ ಖಾಸಗಿ ಕಂಪೆನಿಗಳ ಹಿಡುವಳಿದಾರರನ್ನು ಸೇರ್ಪಡಿಸಬೇಕು.

**ಯೋಜನೆ ೫. ಬಿ. ೨. ಜೀವವೈವಿಧ್ಯ ಯೋಜನೆ ಸಿದ್ಧಪಡಿಸುವಿಕೆಯ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬೇಕಾಗಿದೆ.**

೨. ರಾಜ್ಯ, ಜಿಲ್ಲಾ ಮತ್ತು ಗ್ರಾಮ ಪಂಚಾಯತ್ ಮಟ್ಟಗಳಲ್ಲಿ ಸರ್ಕಾರದ ನಿರ್ಧರಿಸುವ ಅಧಿಕಾರಿಗಳು

- ನೂತನ ಅಭಿಪ್ರಾಯ ಹಾಗೂ ಚಟುವಟಿಕೆಗಳೊಂದಿಗೆ ವಿವಿಧ ಸ್ಥರಗಳಲ್ಲಿ ನಿರ್ಧರಿಸುವ ಅಧಿಕಾರಿಗಳನ್ನು ಪರಿಚಯಿಸಬೇಕಾಗಿದೆ.
- ಧಾರಣ ಸಾಮರ್ಥ್ಯ ಅಧ್ಯಯನದ ಕಲ್ಪನೆಗಳಿಗೆ ತೆರೆದಿಡಬೇಕಾಗಿದೆ.

**ಯೋಜನೆ ೫. ಬಿ. ೩. ಜೀವವೈವಿಧ್ಯತೆ ವಿವರ ಪಟ್ಟಿ ತಯಾರಿಸುವಿಕೆ ಹಾಗೂ ನಿಗಾವಹಿಸುವಿಕೆಯ ಬಗ್ಗೆ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು; ಶಾಲಾ ಮತ್ತು ಕಾಲೇಜು ಅಧ್ಯಾಪಕರು.**

- ಜೀವವೈವಿಧ್ಯದ ಸಂಪನ್ಮೂಲಗಳ ಬಗ್ಗೆ ಸಮಯ ಮತ್ತು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ವೈಜ್ಞಾನಿಕ ವೀಕ್ಷಣೆ ಹಾಗೂ ಸ್ಥಳೀಯ ಜ್ಞಾನ ಸಂಪನ್ನರನ್ನೊಂದಿಗೆ ಕೆಲಸ ಮಾಡುವುದರ ಮೂಲಕ ಪಡೆಯುವಲ್ಲಿ ಶಿಕ್ಷಣ ಸಂಸ್ಥೆಗಳದ್ದು ಮಹತ್ತರವಾದ ಪಾತ್ರವಿದೆ.
- ಇಂತಹ ಪಾತ್ರವನ್ನು ನಿರ್ವಹಿಸಲು ಅಧ್ಯಾಪಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಿ ಬಲಪಡಿಸಬೇಕಾಗಿದೆ.

**ಯೋಜನೆ ೫. ಬಿ. ೪. ಜೀವವೈವಿಧ್ಯದ ವಿವರ ಪಟ್ಟಿ ತಯಾರಿಸುವಿಕೆ ಹಾಗೂ ನಿಗಾವಹಿಸುವಿಕೆಯ ಬಗ್ಗೆ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು; ಸರಕಾರಿ ಸಂಸ್ಥೆಯ ವ್ಯಕ್ತಿಗಳು.**

- ಜೀವವೈವಿಧ್ಯದ ಸಂಪನ್ಮೂಲಗಳ ಬಗ್ಗೆ ಸಮಯ ಮತ್ತು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ವೈಜ್ಞಾನಿಕ ವೀಕ್ಷಣೆ ಹಾಗೂ ಸ್ಥಳೀಯ ಜ್ಞಾನ ಸಂಪನ್ನರೊಂದಿಗೆ ಕೆಲಸ ಮಾಡುವುದರ ಮೂಲಕ ಪಡೆಯುವಲ್ಲಿ ಸರಕಾರಿ ಸಂಸ್ಥೆಗಳದ್ದು ಮಹತ್ತರವಾದ ಪಾತ್ರವಿದೆ.
- ಇಂತಹ ಪಾತ್ರವನ್ನು ನಿರ್ವಹಿಸಲು ಸರಕಾರಿ ಸಂಸ್ಥೆಯ ವ್ಯಕ್ತಿಗಳಿಗೆ ತರಬೇತಿಯನ್ನು ನೀಡಿ ಬಲಪಡಿಸಬೇಕಾಗಿದೆ.

ಯೋಜನೆ ೫.ಬಿ. ೫. ಜೀವವೈವಿಧ್ಯತೆಯ ವಿವರ ಪಟ್ಟಿ ತಯಾರಿಸುವಿಕೆ ಹಾಗೂ ನಿಗಾವಹಿಸುವಿಕೆಯ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು :

ಜಾನಪದ ಪರಿಸರ ತಜ್ಞರು

- ಗುಡ್ಡಗಾಡು ಜನಾಂಗದವರಿಗೆ, ಬೆಸ್ತರಿಗೆ, ರೈತರಿಗೆ, ಜಾನುವಾರು ಮೆಯ್ಯಿಸುವವರಿಗೆ ಸ್ಥಳೀಯ ಜೀವವೈವಿಧ್ಯ ಸಂಪನ್ಮೂಲಗಳ ಬಗ್ಗೆ ಅಮೂಲ್ಯ ಜ್ಞಾನಭಂಡಾರವಿರುತ್ತದೆ.
- ಸಮುದಾಯ ಆಧಾರಿತ ಜೀವವೈವಿಧ್ಯತೆಯ ವಿವರ ಪಟ್ಟಿ ತಯಾರಿಸುವಿಕೆ ಹಾಗೂ ನಿಗಾವಹಿಸುವಿಕೆಯ ಪ್ರಯತ್ನಕ್ಕಾಗಿ ಕೊಡುಗೆಯನ್ನು ನೀಡಲು ಇವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು ಅಗತ್ಯವಾಗಿದೆ.
- ಸಮುದಾಯ ಆಧಾರಿತ ಸಂರಕ್ಷಣೆ ಹಾಗೂ ನಿರಂತರ ಬಳಕೆಯ ಪ್ರಯತ್ನಕ್ಕಾಗಿ ಕೊಡುಗೆಯನ್ನು ನೀಡಲು ಇವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು ಅಗತ್ಯವಾಗಿದೆ.

**ಚಟುವಟಿಕೆ** ೪. ಬಿ. ೧. ಪಠ್ಯ ಮತ್ತು ಶೈಕ್ಷಣಿಕ ಸಾಹಿತ್ಯಗಳನ್ನು ಅಭಿವೃದ್ಧಿಪಡಿಸಲು ಸಮಿತಿಯ ರಚನೆಯಾಗಬೇಕಾಗಿದೆ.

- ಜೀವವೈವಿಧ್ಯ ಅಂಶಗಳ ಪ್ರಥಮ ಹಂತ ವೀಕ್ಷಣೆ ಹಾಗೂ ಸ್ಥಳೀಯ ಜ್ಞಾನ ಸಂಪನ್ನ ವ್ಯಕ್ತಿಗಳೊಂದಿಗೆ ಸಂಪರ್ಕ ಹೊಂದುವುದನ್ನು ಶೈಕ್ಷಣಿಕ ಚಟುವಟಿಕೆಯ ಒಂದು ಭಾಗವಾಗಿ ಸೇರ್ಪಡಿಸಲು ಶೈಕ್ಷಣಿಕ ಪಠ್ಯ ಕ್ರಮಗಳ ಪುನರ್ ವಿಮರ್ಶೆಯ ಅಗತ್ಯವಿದೆ.
- ನೂತನ ಸಾಕ್ಷರತೆ ಹೊಂದಿದವರು ಹಾಗೂ ಇತರ ವಯಸ್ಕರಿಗಾಗಿ ಸಾಹಿತ್ಯ ಮತ್ತು ಕಾರ್ಯಕ್ರಮಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ.
- ಕೊಡಗಿನ ದೇವರ ಕಾಡಿನಂತಹ ಧನಾತ್ಮಕ ಅನುಭವಗಳನ್ನು ದಾಖಲಿಸಬೇಕಾಗಿದೆ.
- ಸ್ಥಳೀಯ ಜ್ಞಾನ ಸಂಪನ್ನ ವ್ಯಕ್ತಿಗಳಿಗಾಗಿ ವಿಶೇಷವಾದ ಸಾಹಿತ್ಯಗಳನ್ನು ಸಿದ್ಧಪಡಿಸ ಬೇಕಾಗಿದೆ.

**ಕಾರ್ಯತಂತ್ರ ೬**

ಜೀವವೈವಿಧ್ಯ ಸಂರಕ್ಷಣೆಗಾಗಿ ಒಗ್ಗೂಡಿತ ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ವ್ಯವಸ್ಥೆಯನ್ನು ಚಾಲನೆಗೊಳಿಸುವುದು

- ವಿಶಾಲ ತಳಹದಿಯ ಜೀವವೈವಿಧ್ಯ ನಿರ್ವಹಣೆ, ಉತ್ತಮ ಮಾಹಿತಿಯತ್ತ ತಳವೂರಿದ ಭಾಗೀಯ ಚಟುವಟಿಕೆಯನ್ನು ಆಧುನಿಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದ ಯುಗಕ್ಕಾಗಿ ಪ್ರೋತ್ಸಾಹಿಸಬೇಕಾಗಿದೆ.

## ಕ್ರಿಯಾಯೋಜನೆ ೬

ಸೂಚಿತ ಕಾರ್ಯಕ್ರಮಗಳು, ಯೋಜನೆಗಳು ಮತ್ತು ಚಟುವಟಿಕೆಗಳು

೬. ಎ ಸ್ಥಳೀಯ ಸಮುದಾಯಗಳಿಗೆ ಜೀವವೈವಿಧ್ಯ ಸಂರಕ್ಷಣೆ ಜಾಗೃತಿ ಮೂಡಿಸುವಿಕೆ ಹಾಗೂ ಮಾಹಿತಿ ಕಾರ್ಯಕ್ರಮಗಳು

**ಯೋಜನೆ ೬. ಎ. ೧.** ಶಾಲಾ ಮತ್ತು ಕಾಲೇಜು ಅಧ್ಯಾಪಕ ಹಾಗೂ ವಿದ್ಯಾರ್ಥಿಗಳಿಗಾಗಿ ಜೀವವೈವಿಧ್ಯತೆಯ ವಿವರ ಪಟ್ಟಿ ತಯಾರಿಸುವಿಕೆ ಮತ್ತು ನಿಗಾವಹಿಸುವಿಕೆಗೆ ಸಂಬಂಧಿತ ಶೈಕ್ಷಣಿಕ ಸಾಹಿತ್ಯ ಹಾಗೂ ತರಬೇತಿ ಕಾರ್ಯಕ್ರಮಗಳು

- ಯೋಗ್ಯ ಮಾನವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.

**ಯೋಜನೆ ೬ ಎ. ೨.** ಸ್ಥಳೀಯ ಹಿಡುವಳಿದಾರರಿಗೆ ಸಮುದಾಯ ವ್ಯವಸ್ಥೆ ಹಾಗೂ ಜೀವವೈವಿಧ್ಯ ಸಂರಕ್ಷಣಾ ತರಬೇತಿಯನ್ನು ಏರ್ಪಡಿಸುವುದು.

- ಯೋಗ್ಯ ಮಾನವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬೇಕು.
- ಸಂರಕ್ಷಣಾ ಪ್ರಯತ್ನಗಳಲ್ಲಿ ಮಹಿಳೆಯರನ್ನು ಹಾಗೂ ಜನಾಂಗದ ದುರ್ಬಲ ವರ್ಗದ ಜನರನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಅವಶ್ಯಕತೆಯಿದೆ.

೬. ಬಿ. ಸಮುದಾಯ ಆಧಾರಿತ ಜೀವವೈವಿಧ್ಯ ಸಂರಕ್ಷಣೆ, ಶಿಕ್ಷಣ ಹಾಗೂ ಸಂಶೋಧನಾ ಕಾರ್ಯಕ್ರಮ

**ಯೋಜನೆ ೬. ಬಿ. ೧** ಜೀವವೈವಿಧ್ಯ ಸಂಶೋಧನೆ ಹಾಗೂ ನಿರ್ವಹಣಾ ಮಾಹಿತಿ ವ್ಯವಸ್ಥೆಗಳ ಬಗ್ಗೆ ತಾಂತ್ರಿಕ ಸ್ಪರ್ಧಾತ್ಮಕ ತರಬೇತಿ

- ಪಂಚಾಯತ್ ಮಟ್ಟದ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಯೋಗ್ಯವಾದ ಮಾನವ ಸಾಮರ್ಥ್ಯಗಳನ್ನು ಅಭಿವೃದ್ಧಿ ಪಡಿಸುವುದರ ಅಗತ್ಯವಿದೆ.
- ನಾಟಿ ವೈದ್ಯರು, ಬೆಸ್ತರು, ಕಿರು ಅರಣ್ಯ ಉತ್ಪನ್ನ ಸಂಗ್ರಾಹಕರು, ದೇವರ ಕಾಡು ಅಥವಾ ಪವಿತ್ರ ಕೊಳಗಳ ಕಾವಲುಗಾರರು ಮುಂತಾದ ಸ್ಥಳೀಯ ಜ್ಞಾನ ಸಂಪನ್ನ ವ್ಯಕ್ತಿಗಳ ಮಾನವ ಸಾಮರ್ಥ್ಯಗಳನ್ನು ಅಭಿವೃದ್ಧಿ ಪಡಿಸುವುದರ ಅಗತ್ಯವಿದೆ.

**ಯೋಜನೆ ೬. ಬಿ. ೨.** ಜೀವವೈವಿಧ್ಯ ಮಾಹಿತಿ ವ್ಯವಸ್ಥೆಗೆ ಮಾರ್ಗದರ್ಶಕ ಗ್ರಾಮ ಜೀವವೈವಿಧ್ಯ ಸಂಶೋಧನೆ ಹಾಗೂ ನಿರ್ವಹಣೆಯ ಸ್ಥಾಪನೆ.

- ವಿಶೇಷವಾಗಿ ಆಯ್ದ ಗ್ರಾಮಗಳ ಸಮೂಹದಲ್ಲಿ ಪ್ರಾಯೋಗಿಕ ಹಂತದ ಚಟುವಟಿಕೆಗಳನ್ನು ಪ್ರಾರಂಭಿಸುವುದು. ಉದಾ:- ಔಷಧೀಯ ಸಸ್ಯ ಸಂಪನ್ಮೂಲಗಳ ಉತ್ತಮ ನಿರ್ವಹಣೆಯಲ್ಲಿ ಭಾಗಿಯಾದವರು.

ಯೋಜನೆ ೬. ಬಿ. ೩ ಸಮುದಾಯ ಆಧಾರಿತ ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ ಜೀವವೈವಿಧ್ಯ ಶಿಕ್ಷಣವನ್ನು ಸ್ಥಳೀಯ ಸಂಘಟನೆಗಳಿಗೆ ನೀಡುವುದು.

- ವಿಶೇಷವಾಗಿ ಆಯ್ದ ಗ್ರಾಮಗಳ ಸಮೂಹದಲ್ಲಿ ಪ್ರಾಯೋಗಿಕ ಹಂತದ ಚಟುವಟಿಕೆಗಳನ್ನು ಪ್ರಾರಂಭಿಸುವುದು ಉದಾ:- ಕೊಡಗಿನ ದೇವರ ಕಾಡುಗಳ ಉತ್ತಮ ನಿರ್ವಹಣೆಯಲ್ಲಿ ತೊಡಗಿಸಿಕೊಂಡವರು.
- ಇಂತಹ ಚಟುವಟಿಕೆಗಳಲ್ಲಿ ಮಹಿಳೆಯರನ್ನು ಹಾಗೂ ಜನಾಂಗದ ದುರ್ಬಲ ವರ್ಗದ ವ್ಯಕ್ತಿಗಳನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದು ಅಗತ್ಯವಾಗಿದೆ.

೬. ಸಿ. ಜೈವಿಕ ಸಂಪನ್ಮೂಲಗಳ ಆಧಾರಿತ ಸಮುದಾಯಗಳಿಗೆ ಮೌಲ್ಯ ಹೆಚ್ಚಿಸಿದ ವಸ್ತುಗಳು ಹಾಗೂ ಪರ್ಯಾಯ ನಿರಂತರ ಜೀವನ ಅಭಿವೃದ್ಧಿ.

ಯೋಜನೆ ೬. ಸಿ. ೧. ಪರಿಸರ ಪ್ರವಾಸೋದ್ಯಮದಂತಹ ಜೀವ ವೈವಿಧ್ಯ ಆಧಾರಿತ ಸಂಘಟನೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಸ್ಥಳೀಯ ಸಾಮರ್ಥ್ಯ ಅಭಿವೃದ್ಧಿಗೊಳಿಸುವುದು.

- ವಿಶೇಷವಾಗಿ ಆಯ್ದ ಗ್ರಾಮಗಳ ಸಮುದಾಯದಲ್ಲಿ ಮಾರ್ಗದರ್ಶಕ ಮಟ್ಟದಲ್ಲಿ ಚಟುವಟಿಕೆಗಳನ್ನು ಪ್ರಾರಂಭಿಸುವುದು.

ಉದಾ : ರಾಷ್ಟ್ರೀಯ ಉದ್ಯಾನವನದ ಹೊರ ವಲಯದಲ್ಲಿ ಪಾರಿಸರಿಕ ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ಉತ್ತಮ ಸಾಮರ್ಥ್ಯದಿಂದ ಭಾಗಿಸುವ ವ್ಯಕ್ತಿಗಳು.

ಯೋಜನೆ ೬. ಸಿ. ೨. ಸಂಗ್ರಹಣೆ, ಕೃಷಿ ಮತ್ತು ಮೌಲ್ಯ ಹೆಚ್ಚಿಸಿದ ಔಷಧೀಯ ಸಸ್ಯಗಳಂತಹ ಅಭಿವೃದ್ಧಿ ಹಾಗೂ ಜೀವವೈವಿಧ್ಯ ಆಧಾರಿತ ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ ಸ್ಥಳೀಯ ಸಾಮರ್ಥ್ಯಗಳನ್ನು ಬಲಪಡಿಸುವುದು.

- ಸಿದ್ಧವಾಗಿ ದೊರಕುವ ಔಷಧೀಯ ಸಸ್ಯಗಳ ಸಂಪನ್ಮೂಲಗಳು ಹಾಗೂ ಮೌಲ್ಯ ಹೆಚ್ಚಿಸುವಿಕೆಯ ಸಾಮರ್ಥ್ಯಕ್ಕಾಗಿ ವಿಶೇಷವಾಗಿ ಆಯ್ದ ಗ್ರಾಮ ಸಮೂಹಗಳಿಗೆ ಪ್ರಾಯೋಗಿಕ ಹಂತದ ಚಟುವಟಿಕೆಗಳನ್ನು ಪ್ರಾರಂಭಿಸುವುದು.
- ಕೊಂಡು ಕೊಳ್ಳುವಿಕೆಯ ಒಪ್ಪಂದ ಮತ್ತು ಇತರ ಜೀವವೈವಿಧ್ಯ ಸ್ನೇಹೀ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಲು ಖಾಸಗಿ ವಲಯಗಳೊಂದಿಗೆ ಶ್ರಮಿಸಬೇಕಾಗಿದೆ.

# ಕರ್ನಾಟಕ ಜೀವ ವೈವಿಧ್ಯ ಕಾರ್ಯತಂತ್ರ ಮತ್ತು ಕ್ರಿಯಾ ಯೋಜನೆ

## ಯೋಜನೆಯ ಅನುಷ್ಠಾನದಲ್ಲಿ ಪಾಲ್ಗೊಳ್ಳಬಹುದಾದ ಸರ್ಕಾರಿ ಇಲಾಖೆಗಳು

1) ಕೃಷಿ
2) ಪಶು ಸಂಗೋಪನೆ
3) ಪುರಾತತ್ವ
4) ಕಲೆ ಮತ್ತು ಸಂಸ್ಕೃತಿ
5) ಮೀನುಗಾರಿಕೆ
6) ಅರಣ್ಯ
7) ಆರೋಗ್ಯ ಮತ್ತು ಕುಟುಂಬ ಕಲ್ಯಾಣ
8) ಉನ್ನತ ಶಿಕ್ಷಣ
9) ತೋಟಗಾರಿಕೆ
10) ವಾರ್ತೆ ಮತ್ತು ಪ್ರಚಾರ
11) ಭೂ ಕಂದಾಯ
12) ವೈದ್ಯಕೀಯ ಶಿಕ್ಷಣ
13) ಸಣ್ಣ ನೀರಾವರಿ
14) ಮಾಲಿನ್ಯ ನಿಯಂತ್ರಣ ಮಂಡಳಿ
15) ಬಂದರು ಮತ್ತು ಜಲಸಾರಿಗೆ
16) ವಿದ್ಯುತ್ ಯೋಜನೆಗಳು
17) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
18) ನಿಯಂತ್ರಿತ ಮಾರುಕಟ್ಟೆಗಳು
19) ಗ್ರಾಮೀಣ ಅಭಿವೃದ್ಧಿ
20) ವಿಜ್ಞಾನ ಮತ್ತು ತಂತ್ರಜ್ಞಾನ
21) ಪರಿಸರ
22) ಶಾಸಕಾಂಗ
23) ಪ್ರವಾಸ
24) ನಗರಾಭಿವೃದ್ಧಿ
25) ಪರಿಶಿಷ್ಟ ಜಾತಿ/ಬುಡಕಟ್ಟು/ಹಿಂದುಳಿದ ವರ್ಗಗಳ ಕಲ್ಯಾಣ
26) ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ

## ವಿವಿಧ ಇಲಾಖೆಗಳು ಕೈಗೊಳ್ಳಬೇಕಾದ ಕಾರ್ಯಗಳು

1) **ಕೃಷಿ ಇಲಾಖೆ**

- ವೈಜ್ಞಾನಿಕ ತಪಶೀಲು ಪಟ್ಟಿ ಸಂಕಲನ
- ಕುಲಾಂತರಿ ಜೀವಿಗಳ ತಪಶೀಲೀಕರಣ ಮತ್ತು ನಿಗಾವಣೆ
- ಜೀವ ವೈವಿಧ್ಯ ನಾಶದಿಂದ ಜೀವನ ನಿರ್ವಹಣೆ ಮೇಲೆ ಆಗಬಹುದಾದ ಪರಿಣಾಮಗಳ ಅಧ್ಯಯನ
- ಹೊಸ ಸವಾಲುಗಳಾದ ಬೌದ್ಧಿಕ ಆಸ್ತಿ ಹಕ್ಕು / ಮತ್ತು ಕುಲಾಂತರಿ ಜೀವಿಗಳ ಬಗ್ಗೆ ಜನಗಳ ಪ್ರತಿಕ್ರಿಯೆಗಳ ದಾಖಲೀಕರಣ
- ಹಣ್ಣುಗಳು ಮತ್ತು ಸಾಂಬಾರ ಸಸ್ಯಗಳ ವಂಶವಾಹಿ ಸಂರಕ್ಷಣಾ ಕ್ಷೇತ್ರಗಳ ಸ್ಥಾಪನೆ
- ಜಮೀನುಗಳಲ್ಲಿ ಬೆಳೆ ವಂಶವಾಹಿ ವೈವಿಧ್ಯತೆ ಸಂರಕ್ಷಣಾ ಕ್ಷೇತ್ರಗಳ ಸ್ಥಾಪನೆ.
- ಕೃಷಿ ಮಾಡಲಾಗುವ ಬೆಳೆಗಳ ವಂಶವಾಹಿ ಸಂಪನ್ಮೂಲ ಕೇಂದ್ರಗಳ ಸ್ಥಾಪನೆ
- ಸ್ವ-ಸ್ಥಾನ ಕೃಷಿ ಜೀವ ವೈವಿಧ್ಯ ಸಂರಕ್ಷಣೆಗೆ ಪೂರಕವಾದ ನೀತಿ ನಿಯಂತ್ರಣ ವ್ಯವಸ್ಥೆಯನ್ನು ರೂಪಿಸುವುದು.
- ಔಷಧೀಯ ಸಸ್ಯಗಳ ಕೃಷಿ, ಸಂಗ್ರಹಣೆ ಮತ್ತು ಮೌಲ್ಯವರ್ಧನೆಯಂಥ ಜೀವ ವೈವಿಧ್ಯ ಆಧಾರಿತ ಉದ್ದಿಮೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಅಗತ್ಯವಾದ ಸ್ಥಾನೀಯ ಸಾಮರ್ಥ್ಯ ನಿರ್ಮಾಣ.

2) **ಪಶು ಸಂಗೋಪನೆ ಇಲಾಖೆ**

ಸಾಕು ಪ್ರಾಣಿಗಳು, ಕೋಳಿಗಳನ್ನು ಮತ್ತು ಮುದ್ದಿನ ಪ್ರಾಣಿಗಳ ದೇಶೀಯ ತಳಿಗಳನ್ನು ಅಭಿವೃದ್ಧಿ ಪಡಿಸುವುದು. ದೇಶೀಯ ವಂಶವಾಹಿ ಸಂಪನ್ಮೂಲಗಳನ್ನು ನಿರ್ವಹಿಸುವುದು ಹಾಗೂ ಅವುಗಳು ಜನಗಳಿಗೆ ಲಭ್ಯವಾಗುವಂತೆ ಮಾಡುವುದು.

3) **ಪುರಾತತ್ವ ಇಲಾಖೆ**

ಖಾಸಗಿ, ಸಮುದಾಯಿಕ ಮತ್ತು ಇತರೆ ಅರಣ್ಯೇತರ ಭೂಮಿ ಹಾಗೂ ಜಲ ಸಂಗ್ರಹಗಳಲ್ಲಿ ಜೀವ ವೈವಿಧ್ಯ ಸಂರಕ್ಷಣೆಗೆ ಅಗತ್ಯವಾದ ನೀತಿ, ಪ್ರೋತ್ಸಾಹಕಗಳು ಮತ್ತು ನಿಯಂತ್ರಣ ವ್ಯವಸ್ಥೆಯನ್ನು ರೂಪಿಸುವುದು.

4) ಕಲೆ ಮತ್ತು ಸಂಸ್ಕೃತಿ ಇಲಾಖೆ

ಜೀವ ವೈವಿಧ್ಯದ ಬಳಕೆಗೆ ಸಂಬಂಧಿಸಿದ ಜಾನಪದ ಮತ್ತು ಇತರೆ ಸಾರ್ವಜನಿಕ ರಂಗದ ಜ್ಞಾನದ ದಾಖಲೀಕರಣ.

5) ಮೀನುಗಾರಿಕೆ ಇಲಾಖೆ

- ಕರಾವಳಿ ಹಾಗೂ ಕಡಲ ಜೀವ ವೈವಿಧ್ಯದ ಸಂರಕ್ಷಣೆಗೆ ಅಗತ್ಯವಾದ ನೀತಿ ಮತ್ತು ನಿಯಂತ್ರಣ ವ್ಯವಸ್ಥೆಯ ರಚನೆ.
- ಸಿಹಿ ನೀರು ಮೀನುಗಳು ಮತ್ತು ಚಿಪ್ಪು ಮೀನುಗಳ ಸುಸ್ಥಿರ ಬಳಕೆಗೆ ಉತ್ತೇಜನ
- ಕಡಲ ಜೀವವೈವಿಧ್ಯ, ಸಂಪನ್ಮೂಲಗಳ ಸಂರಕ್ಷಣೆಗೆ ಕರಾವಳಿ ರಕ್ಷಕ ಪಡೆಯ ಸಾಮರ್ಥ್ಯ ನಿರ್ಮಾಣ
- ಪೌರ ಸಂಸ್ಥೆಗಳಿಗಾಗಿ ಸಾಂಸ್ಥಿಕ ಸಾಮರ್ಥ್ಯ ನಿರ್ಮಾಣ
- ಸಿಹಿ ನೀರು ಜೀವ ವೈವಿಧ್ಯದ ಸಂರಕ್ಷಣೆಗೆ ಅಗತ್ಯವಾದ ನೀತಿ ಹಾಗೂ ನಿಯಂತ್ರಣ ವ್ಯವಸ್ಥೆಯ ರಚನೆ.
- ಕಾರ್ಯಸಾಧು ಆರ್ಥಿಕ ಸಾಧನಗಳ ನಿರ್ಮಾಣ-ಬಳಕೆ ಶುಲ್ಕ, ಜೈವಿಕ ಸಂಪನ್ಮೂಲಗಳು ಹಾಗೂ ಜೀವ ವೈವಿಧ್ಯದ ಸುಸ್ಥಿರ ಬಳಕೆಯನ್ನು ಪ್ರೋತ್ಸಾಹಿಸಲು ಉತ್ತೇಜನಗಳು ಹಾಗೂ ಅಸ್ಥಿರ ಬಳಕೆಯನ್ನು ತಪ್ಪಿಸಲು ದಂಡಗಳು.
- ಕಡಲ ಮೀನುಗಳು ಹಾಗೂ ಚಿಪ್ಪುಮೀನುಗಳ ಸುಸ್ಥಿರ ಬಳಕೆಗೆ ಉತ್ತೇಜನ
- ಹೊರಗಿನ ಹಾಗೂ ಆಕ್ರಮಣಶೀಲ ಪ್ರಭೇದಗಳ ಗುರುತಿಸುವಿಕೆ, ತಪಶೀಲೀಕರಣ ಮತ್ತು ನಿಗಾವಣೆ.
- ಉಪಗ್ರಹ ಪ್ರತಿಬಿಂಬ ಆಧಾರಿತ ಕರಾವಳಿ ಪ್ರದೇಶದ ಮಾಹಿತಿ ನಿರ್ಮಾಣ
- ಮೀನುಗಳು ಹಾಗೂ ಚಿಪ್ಪು ಮೀನುಗಳ ಜೀನ್-ಬ್ಯಾಂಕ್‌ಗಳ ಸ್ಥಾಪನೆ
- ವೈಜ್ಞಾನಿಕ ತಪಶೀಲು ಪಟ್ಟಿಯ ಕ್ರೋಢೀಕರಣ
- ಜೀವವೈವಿಧ್ಯದ ನಾಶದಿಂದ ಜೀವನ ನಿರ್ವಹಣೆಯ ಮೇಲೆ ಉಂಟಾಗುವ ಪರಿಣಾಮಗಳ ಅಧ್ಯಯನ
- ರಕ್ಷಿತ ಕಡಲು ಪ್ರದೇಶಗಳ ಸ್ಥಾಪನೆ
- ರಕ್ಷಿತ ಅಳಿವೆ ಪ್ರದೇಶಗಳ ಸ್ಥಾಪನೆ
- ಆಮೆಗಳ ವಂಶಾಭಿವೃದ್ಧಿ ನಡೆಯುವ ಸಂರಕ್ಷಿತ ಕರಾವಳಿ ಪ್ರದೇಶಗಳ ಸ್ಥಾಪನೆ
- ಕಡಲ ಹಕ್ಕಿಗಳ ವಂಶಾಭಿವೃದ್ಧಿ ನಡೆಯುವ ಸಂರಕ್ಷಿತ ಪ್ರದೇಶಗಳ ಸ್ಥಾಪನೆ
- ಹೊರಗಿನ ಆಕ್ರಮಣಕಾರೀ ಪ್ರಬೇಧಗಳ ನಿಯಂತ್ರಣ

ಅರಣ್ಯ ಇಲಾಖೆ

- ಸಸ್ಯೋದ್ಯಾನಗಳು, ಪ್ರಾಣಿ ಸಂಗ್ರಹಾಲಯಗಳು ಮತ್ತು ಸಫಾರಿ ಉದ್ಯಾನಗಳ ಸುಧಾರಣೆ
- ರಸ್ತೆ ಬದಿಗಳಲ್ಲಿ ಮರ ನೆಡವುದರ ಮೂಲಕ ಫೈಕಸ್ (ಆಲ, ಅರಳಿ) ವೃಕ್ಷ ಸಂಪನ್ಮೂಲಗಳ ಸಂರಕ್ಷಣೆ
- ಸಂರಕ್ಷಿತ ಪ್ರದೇಶಗಳ ಗಡಿಗಳ ಬಗ್ಗೆ ಉಪಗ್ರಹ ಪ್ರತಿಬಿಂಬ ಆಧಾರಿತ ಮಾಹಿತಿ ನಿರ್ಮಾಣ
- ಸಿಹಿ ನೀರು ಜೀವ ವೈವಿಧ್ಯ ಸಂರಕ್ಷಣೆಗೆ ಅಗತ್ಯವಾದ ನೀತಿ ಹಾಗೂ ನಿಯಂತ್ರಣ ವ್ಯವಸ್ಥೆಯ ರಚನೆ
- ಚೌಬೀನೆ ಸಂಪನ್ಮೂಲಗಳ ಸುಸ್ಥಿರ ಬಳಕೆಗೆ ಉತ್ತೇಜನ
- ರಾಜ್ಯ, ಜಿಲ್ಲೆ ಹಾಗೂ ಪಂಚಾಯತಿ ಮಟ್ಟದ ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳ ಸ್ಥಾಪನೆ
- ಕಾರ್ಯಸಾಧು ಆರ್ಥಿಕ ಸಾಧನಗಳ ನಿರ್ಮಾಣ : ಬಳಕೆ ಶುಲ್ಕ, ಜೈವಿಕ ಸಂಪನ್ಮೂಲಗಳು ಹಾಗೂ ಜೀವ ವೈವಿಧ್ಯದ ಸುಸ್ಥಿರ ಬಳಕೆಯನ್ನು ಪ್ರೋತ್ಸಾಹಿಸಲು ಉತ್ತೇಜನಗಳು ಹಾಗೂ ಅಸ್ಥಿರ ಬಳಕೆಯನ್ನು ತಪ್ಪಿಸಲು ದಂಡಗಳು.
- ಪರಿಸರ ಪರಿಣಾಮ ಮಾಪನಗಳಲ್ಲಿ ಆವಾಸ - ಸಂಪರ್ಕ ಅಂಶಗಳು ಮತ್ತು ಜೀವ ವೈವಿಧ್ಯದ ಆಯಾಮಗಳು ಒಳಗೊಳ್ಳುವಂತೆ ಮಾಡುವುದು.
- ಔಷಧೀಯ ಸಸ್ಯಗಳ ನೈಸರ್ಗಿಕ ಬೆಳೆಗಳ ಸುಸ್ಥಿರ ಬಳಕೆಯನ್ನು ಉತ್ತೇಜಿಸುವುದು.
- ಖಾಸಗಿ, ಸಾಮುದಾಯಿಕ ಮತ್ತು ಇತರೆ ಅರಣ್ಯೇತರ ಭೂಮಿಗಳಲ್ಲಿ ಜೀವ ವೈವಿಧ್ಯವನ್ನು ಸಂರಕ್ಷಿಸುವುದಕ್ಕೆ ಅಗತ್ಯವಾದ ನೀತಿ, ಉತ್ತೇಜನಗಳು ಮತ್ತು ನಿಯಂತ್ರಣ ವ್ಯವಸ್ಥೆಯನ್ನು ರಚಿಸುವುದು.
- ಜೀವ ವೈವಿಧ್ಯ ಸಮೃದ್ಧವಾಗಿರುವ ಅರಣ್ಯ ಪ್ರದೇಶಗಳ ಜಂಟಿ ನಿರ್ವಹಣೆಗಾಗಿ ನೀತಿ ಮತ್ತು ನಿಯಂತ್ರಣ ವ್ಯವಸ್ಥೆಯನ್ನು ರಚಿಸುವುದು.
- ಅರಣ್ಯ ಪ್ರದೇಶಗಳ ಜೀವ ವೈವಿಧ್ಯ ನಿರ್ವಹಣೆಗಾಗಿ ನೀತಿ ಮತ್ತು ನಿಯಂತ್ರಣ ವ್ಯವಸ್ಥೆಯನ್ನು ರಚಿಸುವುದು.
- ಜೀವ ವೈವಿಧ್ಯದ ನಷ್ಟವನ್ನು ಸರಿದೂಗಿಸಲು ಅಗತ್ಯವಾದ ಪರಿಹಾರ ಚಟುವಟಿಕೆಗಳಿಗೆ ಮಾರ್ಗದರ್ಶಿ ಸೂತ್ರಗಳನ್ನು ರಚಿಸುವುದು.
- ಅರಣ್ಯಭೂಮಿ ಮತ್ತು ಕಂದಾಯ ಭೂ ಹಿಡುವಳಿ ಎಲ್ಲೆಗಳಿಗೆ ಸಂಬಂಧಿಸಿದಂತೆ ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ನಿರ್ಮಿಸುವುದು.
- ಖಾಸಗಿ ಪಾಲುದಾರರಲ್ಲಿ ಜೀವ ವೈವಿಧ್ಯ ಯೋಜನೆ ಸಾಮರ್ಥ್ಯ ಬೆಳೆಸುವುದು.

- ರಾಜ್ಯ, ಜಿಲ್ಲೆ ಮತ್ತು ಪಂಚಾಯತ್ ಮಟ್ಟಗಳಲ್ಲಿ ನಿರ್ಧಾರ ಕೈಗೊಳ್ಳುವ ಸರ್ಕಾರಿ ಅಧಿಕಾರಿಗಳಲ್ಲಿ ಜೀವ ವೈವಿಧ್ಯ ಯೋಜನೆ ಸಾಮರ್ಥ್ಯ ಬೆಳೆಸುವುದು.
- ಜಾನಪದ ಪರಿಸರ ತಜ್ಞರಲ್ಲಿ, ಜೀವ ವೈವಿಧ್ಯದ ತಪಶೀಲೀಕರಣ ಮತ್ತು ನಿಗಾವಣೆ ಸಾಮರ್ಥ್ಯ ಬೆಳೆಸುವುದು.
- ಹೊಂಗೆ ಮತ್ತು ಬೇವಿನ ವಂಶವಾಹಿ ಸಂಪನ್ಮೂಲ ಕೇಂದ್ರಗಳ ಸ್ಥಾಪನೆ.
- ಸಹ್ಯಾದ್ರಿ ಪರಿಸರ ಸಂವೇದಿ ಪ್ರದೇಶದ ಸಂರಕ್ಷಣೆ.
- ಭೂ ಬಳಕೆ ಯೋಜನೆ ಮತ್ತು ಜೀವ ವೈವಿಧ್ಯ ಸಂರಕ್ಷಣೆ ಯೋಜನೆಗಳನ್ನು ಸಂಬಂಧಪಟ್ಟ ಸಂಸ್ಥೆಗಳ ಯೋಜನೆಗಳಲ್ಲಿ ಅಂತರ್ಗತ ಗೊಳಿಸುವುದು.
- ಕೊಕ್ಕರೆ ಸಂರಕ್ಷಣಾ ಧಾಮಗಳ ಸ್ಥಾಪನೆ.
- ವೈಜ್ಞಾನಿಕ ತಪಶೀಲುಗಳ ಸಂಕಲನ.
- ಸಾಮುದಾಯಿಕ ತಪಶೀಲುಗಳ ಸಂಕಲನ.
- ಹೊರಗಿನ ಹಾಗೂ ಆಕ್ರಮಣಕಾರಿ ಪ್ರಬೇಧಗಳ ಪತ್ತೆಹಚ್ಚುವುದು, ತಪಶೀಲು ಮಾಡುವುದು ಮತ್ತು ಉಸ್ತುವಾರಿ ಮಾಡುವುದು.
- ಮೂಲಿಕಾ ಸಂಗ್ರಹಾಲಯಗಳು, ವಸ್ತುಸಂಗ್ರಹಾಲಯಗಳು ಮತ್ತು ವಿದ್ಯುನ್ಮಾನ ಮಾಹಿತಿ ಸಂಗ್ರಹಗಳ ಸ್ಥಾಪನೆ.
- ಪರಂಪರಾಗತ ಸಂರಕ್ಷಣೆ -ಸುಸ್ಥಿರ ಬಳಕೆ ಅಭ್ಯಾಸಗಳ ದಾಖಲೀಕರಣ.
- ಜೀವವೈವಿಧ್ಯ ನಷ್ಟದಿಂದ ಜೀವನ ನಿರ್ವಹಣೆ ಮೇಲೆ ಆಗುವ ಪರಿಣಾಮಗಳ ಅಧ್ಯಯನ.
- ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಪೂರಕ ಸಂರಕ್ಷಣಾ ಪ್ರದೇಶಗಳ ಸ್ಥಾಪನೆ.
- ಪರಿಸರ - ಪ್ರವಾಸದಂಥ ಜೀವ ವೈವಿಧ್ಯ ಆಧಾರಿತ ಸ್ಥಾನಿಕ ಉದ್ಯಮಗಳ ಸ್ಥಾಪನೆ ಅಭಿವೃದ್ಧಿ ಮತ್ತು ನಿರ್ವಹಣೆ ಬಗ್ಗೆ ಸ್ಥಳೀಯ ಸಾಮರ್ಥ್ಯ ಬೆಳೆಸುವುದು.
- ವಿಶೇಷ ಆವಾಸಗಳ ಸಂರಕ್ಷಣೆಗೆ ಸಂರಕ್ಷಿತ ಕ್ಷೇತ್ರಗಳ ಸ್ಥಾಪನೆ.
- ಗುಂಡು ತೋಪು, ವೃಕ್ಷ ವಂಶವಾಹಿ ವೈವಿಧ್ಯ ಸಂರ್ಕ್ಷಣಾ ಕ್ಷೇತ್ರಗಳ ಸ್ಥಾಪನೆ.
- ಔಷಧೀಯ ಸಸ್ಯ ಸಂರಕ್ಷಣಾ ಕ್ಷೇತ್ರಗಳ ಸ್ಥಾಪನೆ.
- ಔಷಧೀಯ ಸಸ್ಯ ವಂಶವಾಹಿ ಸಂಪನ್ಮೂಲಗಳ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ.
- ಬಾವಲಿ ವಸಾಹತು ಸಂರ್ಕ್ಷಣಾ ಕ್ಷೇತ್ರಗಳ ಸ್ಥಾಪನೆ.
- ಪವಿತ್ರವನಗಳ ಸಂರಕ್ಷಣೆ.
- ಪವಿತ್ರ ಕೊಳಗಳ ಸಂರಕ್ಷಣೆ.

- ಗ್ರಾಮಾರಣ್ಯಗಳು ಮತ್ತು ಗೋಮಾಳಗಳಂಥ ಸಮುದಾಯ ನಿಯಂತ್ರಿತ, ಸುಸ್ಥಿರ ಬಳಕೆಯ ಪ್ರದೇಶಗಳ ಜೀವ ವೈವಿಧ್ಯ-ಸ್ನೇಹಿ ನಿರ್ವಹಣೆ.
- ಸೊಪ್ಪಿನ ಬೆಟ್ಟ, ಖುಷ್ಕಿ ಮತ್ತು ಹಾಡಿಗಳಂಥ ಖಾಸಗಿ ನಿಯಂತ್ರಿತ ಅರಣ್ಯ ಭೂಮಿಗಳ ಜೀವ ವೈವಿಧ್ಯ-ಸ್ನೇಹಿ ನಿರ್ವಹಣೆ.
- ಹೊರಗಿನ ಮತ್ತು ಅಕ್ರಮಣ ಶೀಲ ಪ್ರಬೇಧಗಳ ನಿಯಂತ್ರಣ.
- ಬೀಳು ಅರಣ್ಯ ಪ್ರದೇಶಗಳಲ್ಲಿ ಮತ್ತು ರಸ್ತೆ ಬದಿಗಳಲ್ಲಿ, ಔಷಧೀಯ ಸಸ್ಯ ವಂಶವಾಹಿ ಸಂಪನ್ಮೂಲ ಕೇಂದ್ರಗಳ ಸ್ಥಾಪನೆ.
- ಔಷಧೀಯ ಸಸ್ಯಗಳ ಕೃಷಿ, ಸಂಗ್ರಹಣೆ ಮತ್ತು ಮೌಲ್ಯ ವರ್ಧನೆಗಳಂಥ ಜೀವ ವೈವಿಧ್ಯ ಆಧಾರಿತ ಉದ್ಯಮಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಅಗತ್ಯವಾದ ಸ್ಥಳೀಯ ಸಾಮರ್ಥ್ಯ ನಿರ್ಮಾಣ.
- ಸರ್ಕಾರಿ ಸಂಸ್ಥೆಗಳ ಸಿಬ್ಬಂದಿಗಳಲ್ಲಿ ಜೀವ ವೈವಿಧ್ಯದ ತಪಶೀಲೀಕರಣ ಮತ್ತು ನಿವಾಗಣೆ ಸಾಮರ್ಥ್ಯ ಬೆಳೆಸುವುದು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

- ಜೀವ ವೈವಿಧ್ಯ ನಷ್ಟದಿಂದ ಆರೋಗ್ಯದ ಮೇಲೆ ಉಂಟಾಗುವ ಪರಿಣಾಮಗಳ ಅಧ್ಯಯನ.

ಉನ್ನತ ಶಿಕ್ಷಣ

- ವೈಜ್ಞಾನಿಕ ತಪಶೀಲೀಕರಣ.
- ಜೀವ ವೈವಿಧ್ಯ ಸಂಶೋಧನೆ ಮತ್ತು ನಿರ್ವಹಣಾ ಮಾಹಿತಿ ವ್ಯವಸ್ಥೆ ಬಗ್ಗೆ ತಾಂತ್ರಿಕ ಸಾಮರ್ಥ್ಯ ತರಬೇತಿ.
- ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಜೀವ ವೈವಿಧ್ಯದ ತಪಶೀಲು ಮಾಡುವುದು ಮತ್ತು ನಿಗಾವಣೆ ಬಗ್ಗೆ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ಖಾಸಗಿ ಆಸಕ್ತರಿಗೆ ಜೀವ ವೈವಿಧ್ಯಯೋಜನೆ ಬಗ್ಗೆ ಸಾಮರ್ಥ್ಯ ನಿರ್ಮಾಣ.
- ಶಾಲೆ ಮತ್ತು ಕಾಲೇಜು ಶಿಕ್ಷಕರಿಗೆ ಜೀವ ವೈವಿಧ್ಯ ತಪಶೀಲೀಕರಣ ಮತ್ತು ನಿಗಾವಣೆ ಬಗ್ಗೆ ಸಾಮರ್ಥ್ಯ ವರ್ಧನೆ.
- ಸಮುದಾಯ ಆಧಾರಿತ ತಪಶೀಲು ಸಂಕಲನ.
- ಮೂಲಿಕಾ ಸಂಗ್ರಹಾಲಯಗಳು, ವಸ್ತು ಸಂಗ್ರಹಾಲಯಗಳು ಮತ್ತು ವಿದ್ಯುನ್ಮಾನ ಮಾಹಿತಿ ಸಂಗ್ರಹಾಲಯಗಳ ಸ್ಥಾಪನೆ.

### ತೋಟಗಾರಿಕೆ ಇಲಾಖೆ

- ಹಣ್ಣುಗಳು ಮತ್ತು ಸಂಬಾರ ಪದಾರ್ಥಗಳ ವಂಶವಾಹಿ ವೈವಿಧ್ಯ ಸಂರಕ್ಷಣಾ ಕೇತ್ರಗಳ ಸ್ಥಾಪನೆ.
- ವೈಜ್ಞಾನಿಕ ತಪಶೀಲು ಸಂಕಲನ.
- ಕೃಷಿ -ಜೀವವೈವಿಧ್ಯದ ಸ್ವಸ್ಥಾನ ಸಂರಕ್ಷಣೆಗೆ ನೀತಿ ಮತ್ತು ನಿಯಂತ್ರಣ ವ್ಯವಸ್ಥೆಯ ನಿರ್ಮಾಣ.
- ಬೆಳೆ ಸಸ್ಯ ವಂಶವಾಹಿ ಸಂಪನ್ಮೂಲ ಕೇಂದ್ರಗಳ ಸ್ಥಾಪನೆ.

### ವಾರ್ತಾ ಮತ್ತು ಪ್ರಸಾರ ಇಲಾಖೆ

- ಪಠ್ಯವಸ್ತು ಮತ್ತು ಅಧ್ಯಯನ ಸಾಮಾಗ್ರಿಗಳನ್ನು ಅಭಿವೃದ್ಧಿ ಪಡಿಸಲು ಸಮಿತಿಯ ರಚನೆ.

### ವೈದ್ಯಕೀಯ ಶಿಕ್ಷಣ ಇಲಾಖೆ

- ಹೊರಗಿನ ಅಕ್ರಮಣಕಾರಿ ಪ್ರಬೇಧಗಳ ನಿಯಂತ್ರಣ.

### ಸಣ್ಣ ನೀರಾವರಿ ಇಲಾಖೆ

- ನೀರಾವರಿ ಕೆರೆಗಳ ಜಲಾನಯನ ಪ್ರದೇಶಗಳಲ್ಲಿ ಔಷಧೀಯ ಸಸ್ಯಗಳ ವಂಶವಾಹಿ ಸಂಪನ್ಮೂಲ ಕೇಂದ್ರಗಳ ಸ್ಥಾಪನೆ.
- ಸಿಹಿ ನೀರು ಜೀವ ವೈವಿಧ್ಯತೆ ಸಂರಕ್ಷಣೆಗಾಗಿ ನೀತಿ-ನಿಯಂತ್ರಣ ವ್ಯವಸ್ಥೆಯ ರಚನೆ.
- ಪವಿತ್ರ ಹಳ್ಳಗಳ ಮತ್ತು ನದಿ ಭಾಗಗಳ ಸಂರಕ್ಷಣೆ.
- ಪವಿತ್ರ ಕೊಳಗಳ ಸಂರಕ್ಷಣೆ.
- ಗುಂಡುತೋಪು ವೃಕ್ಷ ವಂಶವಾಹಿ ವೈವಿಧ್ಯ ಸಂರಕ್ಷಣಾ ಕೇಂದ್ರಗಳ ಸ್ಥಾಪನೆ.
- ಹೊರಗಿನ ಅಕ್ರಮಣಶೀಲ ಪ್ರಬೇಧಗಳ ಗುರುತು ಹಚ್ಚುವಿಕೆ ತಪಶೀಲು ಮಾಡುವುದು ಮತ್ತು ಉಸ್ತುವಾರಿ ನಡೆಸುವುದು.
- ನೀರಾವರಿ ಕೆರೆಗಳ ಜೀವ ವೈವಿಧ್ಯ ಸಂರಕ್ಷಣಾ ಕ್ಷೇತ್ರಗಳ ಸ್ಥಾಪನೆ.
- ಜೌಗು ಭೂಮಿಗಳ ಎಲ್ಲೆಗಳ ಬಗ್ಗೆ ಉಪಗ್ರಹ ಆಧಾರಿತ ಮಾಹಿತಿ ಸಂಗ್ರಹಣ ನಿರ್ಮಾಣ.

### ಮಾಲಿನ್ಯ ನಿಯಂತ್ರಣ ಮಂಡಳಿ

- ಜೀವ ವೈವಿಧ್ಯ ಮಾಲಿನ್ಯ ಸೂಚಕಗಳ ಗುರುತು ಹಚ್ಚುವುದು ಮತ್ತು ತಲಶೀಲು ಮಾಡುವುದು.
- ಜೀವ ವೈವಿಧ್ಯದ ಮೇಲೆ ಮಾಲಿನ್ಯಕಾರಕಗಳ ಪರಿಣಾಮಗಳ ಉಸ್ತುವಾರಿ ಗುಣಮಟ್ಟ ಸುಧಾರಣೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವನ್ನು ಉತ್ತೇಜಿಸುವುದು.

- ಪರಿಸರದ ಮೇಲಿನ ಪರಿಣಾಮ ಮಾಪನದ ಗುಣಮಟ್ಟ ಸುಧಾರಣೆ.
- ಪರಿಸರದ ಮೇಲಿನ ಪರಿಣಾಮ ಮಾಪನದ ಗುಣಮಟ್ಟ ಸುಧಾರಣೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವನ್ನು ಪ್ರೋತ್ಸಾಹಿಸುವುದು.

ಬಂದರು ಮತ್ತು ಜಲಸಾರಿಗೆ

- ವಿಶೇಷ ಭದ್ರತೆ ಪ್ರದೇಶಗಳ ಸಂರಕ್ಷಣೆ

ವಿದ್ಯುತ್ ಯೋಜನೆಗಳು

- ವಿಶೇಷ ಭದ್ರತೆ ಪ್ರದೇಶಗಳ ಸಂರಕ್ಷಣೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

- ಸಮುದಾಯ ಆಧಾರಿತ ತಪಶೀಲುಗಳ ಸಂಕಲನ.
- ಶಾಲೆ ಮತ್ತು ಕಾಲೇಜು ಶಿಕ್ಷಕರಲ್ಲಿ ಜೀವ ವೈವಿಧ್ಯ ತಪಶೀಲೀಕರಣ ಸಾಮರ್ಥ್ಯ ವರ್ಧನೆ.
- ಶಾಲಾ ಕಾಲೇಜುಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಜೀವ ವೈವಿಧ್ಯ ತಪಶೀಲು ಮತ್ತು ನಿಗಾ ಮಾಡುವುದರ ಬಗ್ಗೆ ಶಿಕ್ಷಣ ಪರಿಕರಗಳು ಹಾಗೂ ತರಬೇತಿ ಕಾರ್ಯಕ್ರಮಗಳು.

ನಿಯಂತ್ರಿಕ ಮಾರುಕಟ್ಟೆಗಳು

- ಕೃಷಿ ಜೀವ ವೈವಿಧ್ಯದ ಸ್ವಸ್ಥಾನ ಸಂರಕ್ಷಣೆಗೆ ಅಗತ್ಯವಾದ ನೀತಿ-ನಿಯಂತ್ರಣ ವ್ಯವಸ್ಥೆಯ ನಿರ್ಮಾಣ.
- ಔಷಧೀಯ ಸಸ್ಯಗಳ ಕೃಷಿ, ಸಂಗ್ರಹಣೆ ಮತ್ತು ಮೌಲ್ಯ ವರ್ಧನೆಯಂಥ ಜೀವ ವೈವಿಧ್ಯ ಆಧಾರಿತ ಉದ್ಯಮಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಅಗತ್ಯವಾದ ಸ್ಥಳೀಯ ಸಾಮರ್ಥ್ಯ ನಿರ್ಮಾಣ.

ಗ್ರಾಮೀಣ ಅಭಿವೃದ್ಧಿ

- ಜಾನಪದ ಪರಿಸರ ತಜ್ಞರಲ್ಲಿ ಜೀವ ವೈವಿಧ್ಯ ತಪಶೀಲೀಕರಣ ಮತ್ತು ಉಸ್ತುವಾರಿ ಸಾಮರ್ಥ್ಯ ವರ್ಧನೆ.
- ಔಷಧೀಯ ಸಸ್ಯಗಳ ಕೃಷಿ, ಸಂಗ್ರಹಣೆ ಮತ್ತು ಮೌಲ್ಯ ವರ್ಧನೆಯಂಥ ಜೀವ ವೈವಿಧ್ಯ ಆಧಾರಿತ ಉದ್ಯಮಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಅಗತ್ಯವಾದ ಸ್ಥಳೀಯ ಸಾಮರ್ಥ್ಯಗಳ ನಿರ್ಮಾಣ.
- ಸ್ಥಾನಿಕ ಸಮುದಾಯಗಳಿಗೆ ಜೀವ ವೈವಿಧ್ಯ ಶಿಕ್ಷಣಕ್ಕೆ ಅಗತ್ಯವಾದ ಸಮುದಾಯ ಆಧಾರಿತ ಅಭಿವೃದ್ಧಿ ಮತ್ತು ನಿರ್ವಹಣೆ ಕಾರ್ಯಕ್ರಮಗಳು.

- ಜೀವ ವೈವಿಧ್ಯ ಮಾಹಿತಿ ವ್ಯವಸ್ಥೆಗಾಗಿ, ಒಂದು ಪ್ರಾಯೋಗಿಕ ಗ್ರಾಮ, ಜೀವ ವೈವಿಧ್ಯ ಸಂಶೋಧನೆ ಮತ್ತು ನಿರ್ವಹಣೆ ಕೇಂದ್ರದ ಸ್ಥಾಪನೆ.
- ಜೀವ ವೈವಿಧ್ಯ ಸಂಶೋಧನೆ ಮತ್ತು ನಿರ್ವಹಣೆ ಮಾಹಿತಿ ವ್ಯವಸ್ಥೆಗೆ ಬೇಕಾದ ತಾಂತ್ರಿಕ ಕ್ಷಮತೆ ತರಬೇತಿ.
- ಸ್ಥಳೀಯ ಪಾಲುದಾರರಿಗೆ ಸಮುದಾಯ ಸಂಘಟನೆ ಮತ್ತು ಜೀವ ವೈವಿಧ್ಯ ಸಂರಕ್ಷಣೆಯಲ್ಲಿ ತರಬೇತಿ.
- ಜೀವ ವೈವಿಧ್ಯ ಬಳಕೆಗೆ ಸಂಬಂಧಿಸಿದ ಜಾನಪದ ಹಾಗೂ ಇತರೆ ಸಾರ್ವತ್ರಿಕ ಕ್ಷೇತ್ರದ ಮಾಹಿತಿಗಳ ದಾಖಲೀಕರಣ.
- ಖಾಸಗಿ, ಸಾಮುದಾಯಿಕ ಮತ್ತು ಇತರೆ ಅರಣ್ಯೇತರ ಜಮೀನು ಹಾಗೂ ಜಲ ಸಂಗ್ರಹಗಳಲ್ಲಿ ಜೀವ ವೈವಿಧ್ಯ ಸಂರಕ್ಷಣೆಗಾಗಿ ನೀತಿ, ಉತ್ತೇಜನಗಳು ಹಾಗೂ ನಿಯಂತ್ರಣ ವ್ಯವಸ್ಥೆಯ ನಿರ್ಮಾಣ.
- ಸಮುದಾಯ ಆಧಾರಿತ ತಪಶೀಲುಗಳ ಸಂಕಲನ.
- ಪಾರಂಪರಿಕ ಸಂರಕ್ಷಣೆ ಹಾಗೂ ಸುಸ್ಥಿರ ಬಳಕೆ ವಿಧಾನಗಳ ದಾಖಲೀಕರಣ.
- ಪರಂಪರಾಗತ ಸಂರಕ್ಷಣೆ ಹಾಗೂ ಸುಸ್ಥಿರ ಬಳಕೆ ವಿಧಾನಗಳ ಮುಂದುವರಿಕೆ, ಪುನರುಜ್ಜೀವನ ಹಾಗೂ ಅವನತಿಯನ್ನು ಉತ್ತೇಜಿಸುವಂಥ ಸಾಮಾಜಿಕ ಪ್ರೇರಣೆಗಳ ಅಧ್ಯಯನ.
- ಜೀವ ವೈವಿಧ್ಯದ ಬಳಕೆ ಬಗ್ಗೆ ತಿಳುವಳಿಕೆಯ ಪರಂಪರಾಗತ ನಿರ್ವಹಣೆ ವಿಧಾನಗಳ ದಾಖಲೀಕರಣ.
- ಗ್ರಾಮಾರಣ್ಯಗಳು ಮತ್ತು ಗೋಮಾಳಗಳಂಥ ಸಾಮುದಾಯಿಕ ಸುಸ್ಥಿರ ಬಳಕೆ ಪ್ರದೇಶಗಳ ಜೀವ ವೈವಿಧ್ಯ ಸ್ನೇಹ ನಿರ್ವಹಣೆ.
- ಕಾರ್ಯಸಾಧು ಆರ್ಥಿಕ ಸಾಧನಗಳು ಅಭಿವೃದ್ಧಿ-ಪ್ರವೇಶ ಶುಲ್ಕ, ಸುಸ್ಥಿರ ಬಳಕೆ ಪ್ರೋತ್ಸಾಹಕಗಳು, ಜೈವಿಕ ಸಂಪನ್ಮೂಲಗಳು ಮತ್ತು ಜೀವ ವೈವಿಧ್ಯದ ಸುಸ್ಥಿರವಲ್ಲದ ಬಳಕೆಯ್ನು ತಪ್ಪಿಸುವುದಕ್ಕಾಗಿ ದಂಡಗಳು.
- ಔಷಧೀಯ ಸಸ್ಯಗಳ ವಂಶವಾಹಿ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ.
- ಪೌರ ಸಂಸ್ಥೆಗಳ ಕಾರ್ಯವಿಧಾನಗಳಲ್ಲಿ ಜೀವ ವೈವಿಧ್ಯ ಕಳಕಳಿಯನ್ನು ತುಂಬುವುದು.
- ಬೌದ್ಧಿಕ ಆಸ್ತಿಹಕ್ಕುಗಳ ಮತ್ತು ಕುಲಾಂತರಿ ಜೀವಿಗಳಂಥ ಹೊರಹೊಮ್ಮುತ್ತಿರುವ ಸವಾಲುಗಳ ಬಗ್ಗೆ ಜನಗಳ ಪ್ರತಿಕ್ರಿಯೆಗಳ ದಾಖಲೀಕರಣ.

**ವಿಜ್ಞಾನ ಮತ್ತು ತಂತ್ರಜ್ಞಾನ - ಪರಿಸರ ಶಾಸ್ತ್ರ ಮತ್ತು ಪರಿಸರ.**

- ಜಾನಪದ ಪರಿಸರ ತಜ್ಞರಲ್ಲಿ ಜೀವ ವೈವಿಧ್ಯದ ತಪಶೀಲೀಕರಣ ಮತ್ತು ಉಸ್ತುವಾರಿ ಸಾಮರ್ಥ್ಯ ವರ್ಧನೆ.
- ಉಪಗ್ರಹ ಪ್ರತಿಬಿಂಬ ಆಧಾರಿತ ಕಡಲ ಆವಾಸಗಳ ನಕ್ಷೆಗಳ ರಚನೆ.
- ಅಂತರ ಆವಾಸಗಳ ಸಂಪರ್ಕ ಅಧ್ಯಯನ.
- ಬೌದ್ಧಿಕ ಆಸ್ತಿ ಹಕ್ಕುಗಳು ಮತ್ತು ಕುಲಾಂತರಿ ಜೀವಿಗಳ ಹೊರಹೊಮ್ಮುತ್ತಿರುವ ಸವಾಲುಗಳ ಬಗ್ಗೆ ಜನಗಳ ಪ್ರತಿಕ್ರಿಯೆಗಳ ದಾಖಲೀಕರಣ.
- ಗ್ರಾಮಾರಣ್ಯಗಳು ಗೋಮಾಳಗಳಂಥ ಸಮುದಾಯ ನಿಯಂತ್ರಿತ, ಸುಸ್ಥಿರ ಬಳಕೆ ಪ್ರದೇಶಗಳ ಜೀವ ವೈವಿಧ್ಯ - ಸ್ನೇಹಿ ನಿರ್ವಹಣೆ.
- ಔಷಧೀಯ ಸಸ್ಯ ವಂಶವಾಹಿ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ.
- ಪೌರ ಸಂಸ್ಥೆಗಳ ಕಾರ್ಯ ನಿರ್ವಹಣೆಯಲ್ಲಿ ಜೀವ ವೈವಿಧ್ಯದ ಬಗ್ಗೆ ಕಳಕಳಿಯನ್ನು ತುಂಬುವುದು.
- ರಾಜ್ಯ, ಜಿಲ್ಲೆ ಹಾಗೂ ಪಂಚಾಯತಿ ಮಟ್ಟಗಳಲ್ಲಿ ಜೀವ ವೈವಿಧ್ಯ ನಿರ್ವಹಣೆ ಸಮಿತಿಗಳ ಸ್ಥಾಪನೆ.
- ಸ್ಥಾನಿಕ ಪಾಲುದಾರರಿಗಾಗಿ ಸಮುದಾಯ ಸಂಘಟನೆ ಹಾಗೂ ಜೀವ ವೈವಿಧ್ಯ ಸಂರಕ್ಷಣೆ ಸಮಿತಿಗಳ ಸ್ಥಾಪನೆ.
- ಖಾಸಗಿ ಸಾಮುದಾಯಿಕ ಮತ್ತು ಇತರೆ ಅರಣ್ಯೇತರ ಜಮೀನು ಹಾಗೂ ಜಲ ಮೂಲಗಳಲ್ಲಿ ಜೀವ ವೈವಿಧ್ಯ ಸಂರಕ್ಷಣೆಗಾಗಿ ನೀತಿ-ನಿಯಂತ್ರಣಗಳು ಹಾಗೂ ಪ್ರೋತ್ಸಾಹಕಗಳ ವ್ಯವಸ್ಥೆಯ ನಿರ್ಮಾಣ.
- ಉಪಗ್ರಹ ಪ್ರತಿಬಿಂಬ ಆಧಾರಿತ, ಅರಣ್ಯ ಆವಾಸಗಳ ನಕ್ಷೆ ರಚನೆ.
- ಆವಾಸ-ಗುಣಮಟ್ಟದ ಜೀವ ವೈವಿಧ್ಯ ಸೂಚಕಗಳ ಪತ್ತೆ ಹಚ್ಚುವುದು ಹಾಗೂ ತಪಶೀಲೀಕರಣ.
- ಜೀವ ವೈವಿಧ್ಯ ಸಂಶೋಧನೆ ಮತ್ತು ನಿರ್ವಹಣಾ ಮಾಹಿತಿ ವ್ಯವಸ್ಥೆ ಬಗ್ಗೆ ತಾಂತ್ರಿಕ ಸಾಮರ್ಥ್ಯ ತರಬೇತಿ.
- ಜೀವ ವೈವಿಧ್ಯ - ಮಾಹಿತಿ ವ್ಯವಸ್ಥೆಗಾಗಿ ಒಂದು ಗ್ರಾಮ ಮಟ್ಟದ ಜೀವ ವೈವಿಧ್ಯ ಸಂಶೋಧನೆ ಮತ್ತು ನಿರ್ವಹಣೆಯ ಪ್ರಾಯೋಗಿಕ ಕೇಂದ್ರದ ಸ್ಥಾಪನೆ.
- ಸ್ಥಾನಿಕ ಸಮುದಾಯಗಳ ಜೀವ ವೈವಿಧ್ಯ ಶಿಕ್ಷಣಕ್ಕಾಗಿ ಸಮುದಾಯ ಆಧಾರಿತ ಅಭಿವೃದ್ಧಿ ಮತ್ತು ನಿರ್ವಹಣೆ ವ್ಯವಸ್ಥೆ.

- ಔಷಧೀಯ ಸಸ್ಯಗಳ ಕೃಷಿ ಸಂಗ್ರಹಣೆ ಮತ್ತು ಮೌಲ್ಯ ವರ್ಧನೆಯಂಥ ಜೀವ ವೈವಿಧ್ಯ ಆಧಾರಿತ ಉದ್ಯಮಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಅಗತ್ಯವಾದ ಸ್ಥಳೀಯ ಸಾಮರ್ಥ್ಯ ನಿರ್ಮಾಣ.
- ಕಾರ್ಯಸಾಧು ಆರ್ಥಿಕ ಸಾಧನಗಳ ಅಭಿವೃದ್ಧಿ, ಪ್ರವೇಶ ಶುಲ್ಕ, ಸುಸ್ಥಿರ ಬಳಕೆಯ ಪ್ರೋತ್ಸಾಹಕಗಳು, ಜೈವಿಕ ಸಂಪನ್ಮೂಲಗಳು ಮತ್ತು ಜೀವ ವೈವಿಧ್ಯದ ಸುಸ್ಥಿರವಲ್ಲದ ಬಳಕೆಯನ್ನು ತಪ್ಪಿಸುವುದಕ್ಕಾಗಿ ದಂಡಗಳು.
- ಹೊರಗಿನ ಆಕ್ರಮಕ ಪ್ರಬೇಧಗಳ ಗುರುತು ಹಚ್ಚುವುದು, ತಪಶೀಲು ಮಾಡುವುದು ಮತ್ತು ನಿಗಾವಣೆ ಮಾಡುವುದು.
- ಜೀವ ವೈವಿಧ್ಯದ ಬಳಕೆಗೆ ಸಂಬಂಧಿಸಿದ ಜಾನಪದ ಹಾಗೂ ಇತರೆ ಸಾರ್ವಜನಿಕ ಕ್ಷೇತ್ರದ ಮಾಹಿತಿಗಳ ದಾಖಲೀಕರಣ.
- ಕುಲಾಂತರ ಜೀವಿಗಳ ತಪಶೀಲೀಕರಣ ಮತ್ತು ನಿಗಾವಣೆ.
- ವೈಜ್ಞಾನಿಕ ತಪಶೀಲುಗಳ ಸಂಕಲನ.
- ಮೂಲಿಕಾ ಸಂಗ್ರಹಾಲಯಗಳು, ವಸ್ತು ಸಂಗ್ರಹಾಲಯಗಳು ಮತ್ತು ವಿದ್ಯುನ್ಮಾನ ಮಾಹಿತಿ ಮೂಲಗಳ ಸ್ಥಾಪನೆ.

ರಾಜ್ಯ ಶಾಸಕಾಂಗ

- ಜೀವ ವೈವಿಧ್ಯ ನಷ್ಟ ತಡೆಗೆ ಗೇಣಿ ವ್ಯವಸ್ಥೆಯ ಪರಿಣಾಮಗಳ ಅಧ್ಯಯನ.
- ಸಿಹಿನೀರು - ಜೀವ ವೈವಿಧ್ಯ ಸಂರಕ್ಷಣೆಗೆ ನೀತಿ - ನಿಯಂತ್ರಣ ವ್ಯವಸ್ಥೆಯ ರಚನೆ.
- ಜೀವ ವೈವಿಧ್ಯ ನಷ್ಟವನ್ನು ತುಂಬಲು ಪರಿಹಾರ ಕಾರ್ಯಗಳ ಬಗ್ಗೆ ಮಾರ್ಗದರ್ಶಿ ಸೂತ್ರಗಳ ರಚನೆ.
- ಅರಣ್ಯ ಪ್ರದೇಶಗಳ ಜೀವ ವೈವಿಧ್ಯ ನಿರ್ವಹಣೆಗೆ ನೀತಿ - ನಿಯಂತ್ರಣ ವ್ಯವಸ್ಥೆಯ ರಚನೆ.
- ನೀತಿ ಪ್ರಚಾರ.
- ಜೀವ ವೈವಿಧ್ಯ ಸಮೃದ್ಧ ಅರಣ್ಯ ಪ್ರದೇಶಗಳು ಮತ್ತು ಸಂರಕ್ಷಿತ ಪ್ರದೇಶಗಳ ಜಂಟಿ ನಿರ್ವಹಣೆಗೆ ಅಗತ್ಯವಾದ ನೀತಿ - ನಿರ್ವಹಣೆ ವ್ಯವಸ್ಥೆಯ ರಚನೆ.
- ಖಾಸಗಿ ಸಾಮುದಾಯಿಕ ಮತ್ತು ಅರಣ್ಯೇತರ ಭೂಮಿ ಮತ್ತು ಜಲಮೂಲಗಳಲ್ಲಿ ಜೀವ ವೈವಿಧ್ಯ ಸಂರಕ್ಷಣೆಗಾಗಿ ನೀತಿ ನಿಯಂತ್ರಣಗಳ ಹಾಗೂ ಪ್ರೋತ್ಸಾಹಕಗಳ ವ್ಯವಸ್ಥೆಯ ನಿರ್ಮಾಣ.

- ಕರಾವಳಿ ಹಾಗೂ ಕಡಲಿನ ಜೀವ ವೈವಿಧ್ಯ ಸಂರಕ್ಷಣೆಗೆ ನೀತಿ - ನಿಯಂತ್ರಣ ವ್ಯವಸ್ಥೆಯ ರಚನೆ.
- ಕೃಷಿ ಜೀವ ವೈವಿಧ್ಯದ ಸ್ವಸ್ಥಾನೀಯ ಸಂರಕ್ಷಣೆಗಾಗಿ ನೀತಿ - ನಿಯಂತ್ರಣ ವ್ಯವಸ್ಥೆಯ ರಚನೆ.
- ಪೌರ ಸಂಸ್ಥೆಗಳ ಕಾರ್ಯ ವಿಧಾನದಲ್ಲಿ ಜೀವ ವೈವಿಧ್ಯದ ಬಗ್ಗೆ ಕಳಕಳಿಯನ್ನು ತುಂಬುವುದು.

**ಪ್ರವಾಸೋದ್ಯಮ**

- ಪರಿಸರ - ಪ್ರವಾಸದಂಥ ಜೀವ ವೈವಿಧ್ಯ - ಆಧಾರಿತ ಉದ್ಯಮಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸ್ಥಾನಿಕ ಸಾಮರ್ಥ್ಯವರ್ಧನೆ.

**ನಗರಾಭಿವೃದ್ಧಿ**

- ಪೌರ ಸಂಸ್ಥೆಗಳ ಸಾಂಸ್ಥಿಕ ಸಾಮರ್ಥ್ಯ ಬೆಳೆಸುವುದು.
- ನಗರ ಪ್ರದೇಶಗಳ ಜೀವ ವೈವಿಧ್ಯ ಸಂರಕ್ಷಣೆ.
- ಜೀವ ವೈವಿಧ್ಯ ಪರ ನಗರಾರಣ್ಯ ಕಾರ್ಯಕ್ರಮಗಳನ್ನು ರೂಪಿಸುವುದು.
- ಪೌರ ಸಂಸ್ಥೆಗಳ ಕಾರ್ಯ ವೈಖರಿಯಲ್ಲಿ ಜೀವ ವೈವಿಧ್ಯ ಕಳಕಳಿಯನ್ನು ತುಂಬುವುದು.

**ಅನುಸೂಚಿತ ಜಾತಿಗಳು / ಬುಡಕಟ್ಟುಗಳು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ**

- ಸ್ಥಾನಿಕ ಪಾಲುದಾರರಿಗೆ ಸಮುದಾಯ ಸಂಘಟನೆ ಮತ್ತು ಜೀವ ವೈವಿಧ್ಯ ಸಂರಕ್ಷಣೆ ಬಗ್ಗೆ ತರಬೇತಿ.
- ಸ್ಥಾನಿಕ ಸಮುದಾಯಗಳಿಗೆ ಸಮುದಾಯ ಆಧಾರಿತ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಜೀವ ವೈವಿಧ್ಯ ಶಿಕ್ಷಣ ನೀಡುವುದು.

**ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ**

- ಸಮುದಾಯ ಆಧಾರಿತ ಜೀವ ವೈವಿಧ್ಯ ಸಂರಕ್ಷಣೆ ಶಿಕ್ಷಣ ಮತ್ತು ಸಂಶೋಧನೆ ಕಾರ್ಯಕ್ರಮಗಳು.
- ಸ್ಥಾನಿಕ ಪಾಲುದಾರರಿಗೆ ಸಮುದಾಯ ಸಂಘಟನೆ ಮತ್ತು ಜೀವ ವೈವಿಧ್ಯ ಸಂರಕ್ಷಣೆಯಲ್ಲಿ ತರಬೇತಿ.
- ಪರಂಪರಾಗತ ಸಂರಕ್ಷಣೆ ಹಾಗೂ ಸುಸ್ಥಿರ ಬಳಕೆ ಅಭ್ಯಾಸಗಳ ದಾಖಲೀಕರಣ.

ಜೋಗದ ಸಿರಿ ಬೆಳಕಿನಲಿ, ತುಂಗೆಯ ತೆನೆ ಬಳುಕಿನಲಿ
ಸಹ್ಯಾದ್ರಿಯ ಲೋಕದಲಿ, ಉತ್ತುಂಗದ ನಿಲುಕಿನಲಿ
ನಿತ್ಯಹರಿದ್ವರ್ಣವನದ ತೇಗ, ಗಂಧ ತರುಗಳಲಿ
ನಿತ್ಯೋತ್ಸವ ತಾಯೇ ನಿತ್ಯೋತ್ಸವ
ನಿನಗೆ ನಿತ್ಯೋತ್ಸವ ತಾಯೇ ನಿತ್ಯೋತ್ಸವ

– ಪ್ರೊ. ನಿಸಾರ್ ಅಹಮದ್

ಮುದ್ರಕರು : ನವಭಾರತ್ ಎಂಟರ್‌ಪ್ರೈಸಸ್, ಶೇಷಾದ್ರಿಪುರಂ, ಬೆಂಗಳೂರು - 560 020
✆ 3364142, 3364682